ಸಂಪುಟ: 01 ಸಂಚಿಕೆ: 86 ಪುಟ: 04 ಬೆಲೆ: 02 ಗುರುವಾರ ಸೆಪ್ಟೆಂಬರ್ 10 2026 ಮೊ: 7411699198/7406928404

# ಅಜಾತ ಶತ್ರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...
ಕನ್ನಡ ದಿನ ಪತ್ರಿಕೆ
ಪ್ರದೀಪಕುಮಾರ
ಸಂಪಾದಕರು




Volume:01 Issue: 86 Pages:04 Price:02 THURSDAY SEPTEMBER 10 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ



ತನ್ನೊಳಗೆ ಎಷ್ಟೆ ಕಷ್ಟ ನೋವು ಇದ್ರೂ ಸಹ ಅದನ್ನೆಲ್ಲ ನುಂಗಿ,ಬೇರೆಯವ–ರಿಗೆ ಒಳ್ಳೆದನ್ನೆ ಬಯಸೋ ಹೃದಯ ಸಿಕ್ರೆ ಯಾವ್ದೆ ಕಾರಣಕ್ಕೂ ಕಳ್ಕೊಬೇಡಿ. ಅಂತಹ ಹೃದಯಕ್ಕೆ ವಿಶ್ವದ ಯಾವ ಪರಿಕರಗಳಿಂದನೂ ಬೆಲೆ ಕಟ್ಟಲಾಗದಷ್ಟು ಶ್ರೀಮಂತವಾಗಿರುತ್ತೆ.

ವಾಣಿ ಭಂಡಾರಿ.

# ಬ್ಲಾಕ್‌ಮೇಲ್‌ಗೆಲ್ಲಾ ಹೆದರುವುದಿಲ್ಲ

## ನನ್ನ ಹಿಂದೆ ಕಾಂಗ್ರೆಸ್ ಸೇನೆ ಇದೆ : ಸಿಎಂ ಡಿಕೆಶಿ



ಬೆಂಗಳೂರು: ಬ್ಲಾಕ್‌ಮೇಲ್‌ಗೆಲ್ಲಾ ಹೆದರುವುದಿಲ್ಲ. ನನ್ನ ಹಿಂದೆ ಕಾಂಗ್ರೆಸ್ ಸೇನೆ ಇದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದ್ದಾರೆ. ಭಾರತ್ ಜೋಡೋ ಯಾತ್ರೆಯ 5ನೇ ವಾರ್ಷಿಕೋತ್ಸವ ಅಂಗವಾಗಿ ಕೆಪಿಸಿಸಿ ಕಚೇರಿಯ ಭಾರತ್ ಜೋಡೋ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪತ್ರಿಕಾಗೋಷ್ಠಿ ಮಾಡಿದರೆ ದೇಶವೇ ಅಲ್ಲೋಲಕಲ್ಲೋಲವಾಗುತ್ತದೆ ಎಂದು ಕೆಲ ನಾಯಕರು ಹೇಳುತ್ತಾರೆ. ನಾನು ಅದಕ್ಕೆಲ್ಲ ಹೆದರುವುದಿಲ್ಲ. ರಾಹುಲ್ ಗಾಂಧಿ ಪ್ರಶ್ನೆ ಮಾಡಿದ್ದಕ್ಕೆ ಕೇಸ್ ಹಾಕಿದ್ದಾರೆ. ಇಂತಹದ್ದನ್ನೆಲ್ಲಾ ನಾವು ನೋಡಿದ್ದೇವೆ ಎಂದರು.

ನಾಳೆ ರಾಜ್ಯ ಸರ್ಕಾರಕ್ಕೆ 100 ದಿನ ತುಂಬಲಿದೆ. 50 ಸಾವಿರ ಜನರನ್ನು ಸೇರಿಸಿ ಬೃಹತ್ ಸಮಾವೇಶಮಾಡಬೇಕೆಂಬ ಉದ್ದೇಶವಿತ್ತು.ಬರ ಇರುವ ಕಾರಣಕ್ಕಾಗಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಚಿಕ್ಕ ಕಾರ್ಯಕ್ರಮ ಮಾಡುತ್ತಿದ್ದೇವೆ. ಇದನ್ನೇ ಆಹ್ವಾನ ಎಂದು ಪರಿಗಣಿಸಿ ಪಕ್ಷದ ಪದಾಧಿಕಾ–ರಿಗಳು ಭಾಗವಹಿಸಬೇಕು. ಕಾರ್ಯಕ್ರಮದಲ್ಲಿ ಎಲ್ಲಾ ವರ್ಗದ ಅಭಿವೃದ್ಧಿಗೆ ನಾಳೆ ಹೊಸ ಯೋಜನೆಗಳನ್ನು ಘೋಷಿಸುತ್ತೇವೆ ಎಂದರು. ಬಿಜೆಪಿಯವರು ಪಾದಯಾತ್ರೆ ಮಾಡಿದ್ದಾರೆ. ನಾನು ಸುಮನೆ ಇರುವುದಿಲ್ಲ.

ಹಿಂದೆ ಮೈಸೂರು ಪಾದಯಾತ್ರೆಗೆ ತಕ್ಕ ಉತ್ತರ ನೀಡಿದ್ದೆ. ಆ ವೇಳೆ ನಮ ನಾಯಕರ ವಿರುದ್ಧ ಮಾಡಿದ್ದ ಆರೋಪ ಸುಳ್ಳು ಎಂದು ನಂತರ ಸಾಬೀತಾಯಿತು. ಬಳ್ಳಾರಿ ಪಾದಯಾತ್ರೆಗೂ ಅದೇ ರೀತಿ ತಕ್ಕ ಉತ್ತರ ನೀಡುತ್ತೇನೆ ಎಂದರು. 2028ರ ವಿಧಾನಸಭೆ, 2029ರ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿದೆ ಎಂದ ಅವರು, ಬಿಜೆಪಿ–ಜೆಡಿಎಸ್‌ನವರಿಗೆ ಪ್ರಿಯಾಂಕ್ ಖರ್ಗೆ ಗೃಹ ಸಚಿವರಾಗಿರುವುದನ್ನು ಸಹಿಸಲಾಗುತ್ತಿಲ್ಲ. ಕೆಪಿಎಸ್‌ಸಿ ನೇಮಕಾತಿ ವಿಚಾರದಲ್ಲಿ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದರು. ಇದು ಕಾಂಗ್ರೆಸ್‌ನ ಕಾರ್ಯಕ್ರಮವಲ್ಲ. ನೊಂದವರ, ಯುವಕರ, ರೈತರ, ಮಹಿಳೆಯರು ಅನುಭವಿಸಿದ ನೋವುಗಳಿಗೆ ಪರಿಹಾರ ಒದಗಿಸುವ ಅಭಿಯಾನವಾಗಿತ್ತು.

ದೇಶದ ಐಕ್ಯತೆ, ಸಮಗ್ರತೆ, ಜನರ ನೋವುಗಳಿಗೆ ಸ್ಪಂದನೆ ದೊರಕಿತು ಎಂದರು. ಭಾರತ್ ಜೋಡೋ ಯುವ ಸಂಘಗಳನ್ನು ರಚಿಸಿರುವ ಬಗ್ಗೆ ವಿವರಣೆ ನೀಡಿದ ಅವರು, ಭಾರತ್ ಜೋಡೋ ಟ್ರಸ್ಟ್‌ನಿಂದ ರಾಜಕೀಯವಾಗಿ ನಾಯಕತ್ವ ಮತ್ತು ಕಾಂಗ್ರೆಸ್‌ನ ಆಶಯಗಳನ್ನು ತಿಳಿಸುವ ತರಬೇತಿ ಕೇಂದ್ರವನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಈ ಬಗ್ಗೆ ಹಿರಿಯ ನಾಯಕರ ಜೊತೆ ಚರ್ಚೆ ನಡೆಸಲಾಗಿದೆ ಎಂದರು. ಭಾರತ್ ಜೋಡೋ ಯಾತ್ರೆಯನ್ನು ಇಲ್ಲಿಗೆ ನಿಲ್ಲಿಸುವುದಿಲ್ಲ. ಅದರ ಹೆಸರಿನಲ್ಲಿ ಮತ್ತಷ್ಟು ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ.

ಭಾರತ್ ಜೋಡೋ ಯುವಸಂಘಕ್ಕೆ ಆನ್‌ಲೈನ್‌ನಲ್ಲಿ 7.80 ಲಕ್ಷ ನೋಂದಣಿಯಾಗಿದ್ದಾರೆ. ಇದು ಸಾಲುವುದಿಲ್ಲ. ಆಫ್‌ಲೈನ್‌ನಲ್ಲೂ ನೋಂದಣಿಗೆ ಅವಕಾಶ ಕಲ್ಪಿಸಲಾಗುವುದು ಎಂದರು. ಗ್ರಾಪಂ ಮಟ್ಟದಲ್ಲೂ ಗ್ಯಾರಂಟಿ ಅನುಷ್ಠಾನ ಸಮಿತಿಗೆ ತಲಾ 6 ಜನ ಸದಸ್ಯರನ್ನು ವಾರದೊಳಗೆ ನೇಮಕಾತಿ ಮಾಡಲಾಗು ವುದು. ಪ್ರತಿ ತಾಲ್ಲೂಕಿನಲ್ಲೂ 250 ರಿಂದ 300 ಜನ ಆಯ್ಕೆಯಾಗಿ, ಸರ್ಕಾರದ ಗೌರವ ಪಡೆಯಲಿದ್ದಾರೆ ಎಂದು ವಿವರಿಸಿದರು. ಪ್ರತಿಭೆ ಯಾರ ಸ್ವತ್ತು ಅಲ್ಲ, ಹಳ್ಳಿ ಹುಡುಗ ಗಿಲ್ಲಿ ನಟ ಇದಕ್ಕೆ ಉದಾಹರಣೆ. ಭಾರತ್ ಜೋಡೋ ಪ್ರತಿಭಾನ್ವೇಷಣೆಯ ವೇದಿಕೆಯಾಗಲಿದೆ ಎಂದರು.

ಯಾತ್ರಿಗಳಿಗೆ ಗೌರವ: ಕನ್ಯಾಕುಮಾರಿಯಿಂದ ಕಾಶೀರದವರೆಗೂ ರಾಹುಲ್ ಗಾಂಧಿಯವರು ನಡೆಸಿದ ಪಾದಯಾತ್ರೆಯಲ್ಲಿ ಅರಂಭದಿಂದ ಕೊನೆಯವರೆಗೆ ಪಾಲ್ಗೊಂಡಿದ್ದ 8 ಜನರ ಪೈಕಿ 6 ಜನರನ್ನು ವೇದಿಕೆಯಲ್ಲಿ ಕೂರಿಸಿ ಸನಾನಿಸಲಾಯಿತು.

ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರು ಪಕ್ಷದ ಬದ್ಧತೆ ವಿಚಾರವಾಗಿ ಈ 6 ಜನರನ್ನು ನೋಡಿ ನಾವು ಕಲಿಯಬೇಕಿದೆ. ಅದಕ್ಕಾಗಿ ಇಂದಿನ ಕಾರ್ಯಕ್ರಮದಲ್ಲಿ ಅವರೇ ಕೇಂದ್ರ ಬಿಂದುಗಳು. ನಾವು ಕೆಳಗೆ ಕೂರುತ್ತೇವೆ.

## ಬಸ್ ಮತ್ತು ಟ್ರ್ಯಾಕ್ಟರ್ ಭೀಕರ ಅಪಘಾತ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಮಂಗಳೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾ–ರಿಯಲ್ಲಿ KSRTC ಬಸ್ ಮತ್ತು ಟ್ರ್ಯಾಕ್ಟರ್ ಭೀಕರ ಅಪಘಾತ.. ಬಸ್ ಚಾಲಕ ಸ್ಥಳದಲ್ಲೆ ಸಾವು 10 ಕ್ಕೂ ಹೆಚ್ಚು ಜನರಿಗೆ ಗಾಯ..!**



KSRTC ಬಸ್ ಚಾಲಕನ ಅಜಾಗಕರೂಕತೆ ಚಾಲನೆಯಿಂದ ಬಸ್ ಅಪಘಾತ. ಕಬ್ಬಿಣದ ಬಾರ್ ತುಂಬಿಕೊಂಡು ಹೋಗ್ತಿದ್ದ ಟ್ರ್ಯಾಕ್ಟರ್ ಗೆ ಹಿಂಬದಿಯಿಂದ ಬಸ್ ಡಿಕ್ಕಿಯ ರಭಸಕ್ಕೆ ಕಬ್ಬಿಣದ ಬಾರ್ ಗಳು ಬಸ್ ಒಳಗೆ ನುಗ್ಗಿದ ಪರಿಣಾಮ ಚಾಲಕ ಸ್ಥಳದಲ್ಲೆ ಮೃತಪಟ್ಟಿದಾರೆ 10 ಕ್ಕೂ ಹೆಚ್ಚು ಜನರಿಗೆ ಗಾಯ. ನಾಗಮಂಗಲ ತಾಲೂಕಿನ ವರಹಸಂದ್ರ ಗೇಟ್ ಬಳಿಯ ಮಂ– ಬೆಂ ಹೆದ್ದಾರಿಯಲ್ಲಿ ಘಟನೆ. ಹಾಸನ ಮೂಲದ ಬಸ್ ಚಾಲಕ ಶೇಖರ್ ದೇಹಕ್ಕೆ ಕಬ್ಬಿಣದ ರಾಡ್ ಹಾಗು ಬಾರ್ ಗಳು ನುಗ್ಗಿ ಸ್ಥಳದಲ್ಲೆ ಸಾವು. 8 ಜನರ ಸ್ಥಿತಿ ಚಿಂತಾಜನಕ ಬೆಳ್ಳೂರಿನ ಏಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಬೆಳ್ಳೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ.

## ಕಾರಟಗಿ ಆರಾಧ್ಯ ದೈವ ಶ್ರೀ ಕಲಬುರಗಿ ಶರಣ ಬಸವೇಶ್ವರರ 52 ನೆಯ ವರ್ಷದ ಜಾತ್ರಾ ಮಹೋತ್ಸವ ಪೂರ್ವ ಸಿದ್ಧತೆಗೆ ಪುರಸಭೆ ಹಾಗೂ ದೇವಸ್ಥಾನ ಸಮಿತಿ ಸಭೆ



ಅ.ಶ. ಸುದ್ದಿ ಕಾರಟಗಿ

**ಕಾರಟಗಿ ಕಾರಟಗಿ ಪಟ್ಟಣದ ಆರಾಧ್ಯ ದೈವ ಶ್ರೀ ಕಲಬುರಗಿ ಶರಣ ಬಸವೇಶ್ವರರ 52 ನೆಯ ವರ್ಷದ ಜಾತ್ರಾ ಮಹೋತ್ಸವ ಇನ್ನೂ ಕೆಲವೇ ದಿನಗಳು ಬಾಕಿ ಇದೆ, ಜಾತ್ರೆಗೆ ಸುತ್ತಲಿನ ಹಳ್ಳಿಗಳಿಂದ ವಿವಿಧ ಜಿಲ್ಲೆಗಳಿಂದ ಜನಸಾಗರ ಬರಲಿದ್ದು ಜಾತ್ರೆಗೆ ಬರುವ ಭಕ್ತಾದಿಗಳಿಗೆ ಸೌಲಭ್ಯಗಳನ್ನು ನೀಡುವ ನಿಟ್ಟಿನಲ್ಲಿ ಬುಧವಾರ ಜಾತ್ರೆಯ ಪೂರ್ವಸಿದ್ಧತೆ ಕುರಿತು ಸಭೆ ನಡೆಸಲಾಯಿತು.**

ಸಭೆಗೂ ಮುನ್ನ ದೇವಸ್ಥಾನ ಆವರಣ ಭೋಜನಾಲಯ, ಕುಡಿಯುವ ನೀರಿನ ಜಾಗ,ರಥ ಬೀದಿ, ಅಡುಗೆ ಸ್ಥಳ, ಜಾತ್ರ ಸ್ಥಳಗಳನ್ನು ಪರಿಶೀಲಿಸಲಾಯಿತು, ನಂತರ ದೇವಸ್ಥಾನದಲ್ಲಿ ಸೌಲಭ್ಯಗಳ ಕುರಿತು ಸಭೆ ನಡೆಸಿದರು. ಈ ಸಂದರ್ಭದಲ್ಲಿ ಪುರಸಭೆಯ ಮುಖ್ಯಾಧಿಕಾರಿಗಳಾದ ಸಾಬಣ್ಣ ಕಟ್ಟಿಕಾರ್ ಮಾತನಾಡಿ ಜಾತ್ರೆಯ ಸಂದರ್ಭದಲ್ಲಿ ಸ್ವಚ್ಛತೆ ನೀರು ಹಾಗೂ ರಸ್ತೆಯ ಸ್ವಚ್ಛತೆ ಕುರಿತು ಅಗತ್ಯ ಕ್ರಮ ಕೈಗೊಳ್ಳುತ್ತೇವೆ,

ಜಾತ್ರೆಯ ಸಂದರ್ಭದಲ್ಲಿ ಪೌರಕಾರ್ಮಿಕರು ಮತ್ತು ಸಿಬ್ಬಂದಿ ವರ್ಗ ದೇವಸ್ಥಾನ ಸಮಿತಿಯೊಂದಿಗೆ ಸೌಲಭ್ಯಗಳು ನೀಡಲು ಸಂಪರ್ಕದಲ್ಲಿ ಇರುತ್ತೇವೆ, ಎಂದಿದ್ದಾರೆ ನಂತರ ಪುರಸಭೆಯ ಅಧ್ಯಕರಾದ ಮಂಜುನಾಥ್ ಮೇಗೂರು ಮಾತನಾಡಿ ಜಾತ್ರೆ ಸಂದರ್ಭದಲ್ಲಿ ಮೂಲಭೂತ ಸೌಕರ್ಯಗಳ ನೀಡಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತೇವೆ ,

ಮುಖ್ಯವಾಗಿ ರಥ ಬೀದಿಯಲ್ಲಿ ರಸ್ತೆಯಲ್ಲಿ ಇರುವ ತಗ್ಗು ಗುಂಡಿಗಳನ್ನು ಮರಂ ಹಾಕಿ ಸಮತಟ್ಟು ಮಾಡಲಾಗುವುದು, ಗಂಗೆ ಸ್ಥಳದಲ್ಲಿ ಸ್ವಚ್ಛತೆ ಮಾಡಲಾಗುವುದು ಗಂಗೆ ಸ್ಥಳ ಕಾರ್ಯಕ್ರಮದಂದು ಸಾರ್ವಜನಿಕರಿಗೆ ಸಂಚಾರ ಸುಗಮವಾಗಲು 21 ನೆಯ ವಾರ್ಡ್ ನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು ಈ ಸಂದರ್ಭದಲ್ಲಿ ಪುರಸಭೆಯ ಸಿಬ್ಬಂದಿ ವರ್ಗ ಮತ್ತು ದೇವಸ್ಥಾನ ಸಮಿತಿಯ ಸದಸ್ಯರುಗಳು ಉಪಸ್ಥಿತರಿದ್ದರು.

## ಸಮಸ್ಯೆಗಳನ್ನು ಸಂಯಮದಿಂದ ಎದುರಿಸಿ: ಮಲ್ಲಿಕಾರ್ಜುನ ಮಾಳಿ

ಅ.ಶ. ಸುದ್ದಿ ವಿಜಯಪುರ



**ವಿಜಯಪುರ: ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಜ್ಞಾನ, ಶಾಂತಿ ಮತ್ತು ಸಂಯಮದಿಂದ ಎದುರಿಸಿ ಯಶಸ್ಸು ಸಾಧಿಸಬೇಕು ಎಂದು ಕೇಂದ್ರ ಕಾರಾಗೃಹದ ಅಧೀಕ್ಷಕ ಮಲ್ಲಿಕಾರ್ಜುನ ಮಾಳಿ ಹೇಳಿದರು. ನಗರದ ಜಿಲ್ಲಾ ಕಾರಾಗೃಹದಲ್ಲಿ ನಡೆದ ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಉದ್ವೇಗದಿಂದ ತಪ್ಪು ಕೃತ್ಯಗಳನ್ನು ಎಸಗಿ ಜೀವನವನ್ನು ವ್ಯರ್ಥ ಮಾಡಿಕೊಳ್ಳಬಾರದು ಎಂದರು.**

ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಎಂ.ಬಿ. ಮೊರಟಗಿ ಮಾತನಾಡಿ, ಶಿಕ್ಷಣ ಮತ್ತು ಅಕ್ಷರ ಜ್ಞಾನದಿಂದ ವ್ಯಕ್ತಿಯ ಚಿಂತನಾ ಶಕ್ತಿ ವಿಸ್ತಾರಗೊಳ್ಳುತ್ತದೆ. ಸಾಕ್ಷರರಾಗುವುದು ಪ್ರತಿಯೊಬ್ಬರ ಮೂಲ ಕರ್ತವ್ಯವಾಗಿದೆ ಎಂದರು.

ಡಯಟ್‌ನ ಅಭಿವೃದ್ಧಿ ಉಪನಿರ್ದೇಶಕಿ ಸೈಯಿದಾ ಅನ್ನೀಸ್ ಮಾತನಾಡಿ, ಓದು–ಬರಹ ಹಾಗೂ ಜ್ಞಾನಿಗಳ ವಿಚಾರಗಳನ್ನು ತಿಳಿದುಕೊಳ್ಳುವ ಮೂಲಕ ಮಾನಸಿಕ ಒತ್ತಡದಿಂದ ಹೊರಬಂದು ಉತ್ತಮ ಜೀವನ ರೂಪಿಸಿಕೊಳ್ಳಬಹುದು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಬಂಧಿಗಳಿಗೆ ಸಾಕ್ಷರತಾ ಪ್ರತಿಜ್ಞಾವಿಧಿ ಬೋಧಿಸಲಾಯಿತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವ–ರಿಗೆ ಬಹುಮಾನ ವಿತರಿಸಲಾಯಿತು.

## SIR ಮತದಾರರ ಪಟ್ಟಿ ಪರಿಶೀಲನೆ: ಮನೆ ಮನೆಗೆ ಭೇಟಿ ನೀಡಿ NO Mapping ಇತ್ಯರ್ಥ





ಅ.ಶ. ಸುದ್ದಿ ಕುಕನೂರು

**ಕುಕನೂರು: ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (SIR) ಕಾರ್ಯದ ಅಂಗವಾಗಿ ಭಾನಪೂರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿಯಲ್ಲಿನ NO Mapping ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಕಾರ್ಯ ಕೈಗೊಳ್ಳಲಾಯಿತು. ತಾಲೂಕು ಪಂಚಾಯಿತಿ ಕುಕನೂರಿನ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ಗ್ರಾಮ ಪಂಚಾಯಿತಿ ಸಿಬ್ಬಂದಿಗಳು ಹಾಗೂ ಬೂತ್ ಮಟ್ಟದ ಅಧಿಕಾರಿಗಳು (BLO) ಮನೆ ಮನೆಗೆ ಭೇಟಿ ನೀಡಿ ಮತದಾರರ ವಿವರಗಳನ್ನು ಪರಿಶೀಲಿಸಿದರು.**

ಮತದಾರರ ಪಟ್ಟಿಯಲ್ಲಿ ಬಾಕಿ ಉಳಿದಿದ್ದ NO Mapping ಪ್ರಕರಣಗಳನ್ನು ಸ್ಥಳದಲ್ಲಿಯೇ ಪರಿಶೀಲಿಸಿ, ಅಗತ್ಯ ದಾಖಲೆಗಳನ್ನು ಪರಿಶೀಲಿಸುವ ಮೂಲಕ ಇತ್ಯರ್ಥಪಡಿಸುವ ಕ್ರಮ ಕೈಗೊಳ್ಳಲಾಯಿತು.

ಈ ಕಾರ್ಯಾಚರಣೆಯಲ್ಲಿ ಗ್ರಾಮ ಪಂಚಾಯಿತಿ ಸಿಬ್ಬಂದಿಗಳು ಹಾಗೂ BLOಗಳು ಸಕ್ರಿಯವಾಗಿ ಭಾಗವಹಿಸಿ, SIR ಮತದಾರರ ಪಟ್ಟಿ ಪರಿಶೀಲನಾ ಕಾರ್ಯಕ್ಕೆ ಅಗತ್ಯ ಸಹಕಾರ ನೀಡಿದರು. ಮತದಾರರ ಪಟ್ಟಿಯನ್ನು ನೈಜ, ದೋಷರಹಿತ ಹಾಗೂ ಸಮರ್ಪಕವಾಗಿ ರೂಪಿಸುವ ನಿಟ್ಟಿನಲ್ಲಿ ಮನೆ ಮನೆಗೆ ತೆರಳಿ ಕೈಗೊಂಡ ಈ ಪರಿಶೀಲನಾ ಕಾರ್ಯವು ಮಹತ್ವದ್ದಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

## ಶಾಂತಿಯುತವಾಗಿ ಹಾಗೂ ಪರಿಸರ ಸ್ನೇಹಿಯಾಗಿ ಗಣೇಶೋತ್ಸವ ಆಚರಿಸಲು ಪೊಲೀಸರ ಮನವಿ

ಅ.ಶ. ಸುದ್ದಿ ಕುಕನೂರು



**ಕುಕನೂರು: ಮುಂಬರುವ ಗಣೇಶ ಚತುರ್ಥಿ ಹಬ್ಬವನ್ನು ಶಾಂತಿಯುತವಾಗಿ, ಸೌಹಾರ್ದಯುತವಾಗಿ ಹಾಗೂ ಪರಿಸರ ಸ್ನೇಹಿಯಾಗಿ ಆಚರಿಸುವ ನಿಟ್ಟಿನಲ್ಲಿ ಕುಕನೂರು ಪೊಲೀಸ್ ಠಾಣೆಯಲ್ಲಿ ಶಾಂತಿ ಸಭೆಯನ್ನು ಮಂಗಳವಾರದಂದು ಕರೆಯಲಾಯಿತು.**

ಸಭೆಯಲ್ಲಿ ವಿವಿಧ ಗ್ರಾಮಗಳಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸುವ ಗುರುಹಿರಿಯರು, ಯುವಕರು ಹಾಗೂ ಮುಖಂಡರೊಂದಿಗೆ ಗಣೇಶೋತ್ಸವದ ಸಂದರ್ಭದಲ್ಲಿ ಪಾಲಿಸಬೇಕಾದ ನಿಯಮಗಳು ಮತ್ತು ಮುನ್ನೆಚ್ಚ–ರಿಕೆ ಕ್ರಮಗಳ ಕುರಿತು ಚರ್ಚಿಸಲಾಯಿತು. ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸುವ ಸ್ಥಳ, ಮೆರವಣಿಗೆ ಹಾಗೂ ವಿಸರ್ಜನೆ ಕಾರ್ಯಕ್ರಮಗಳ ಕುರಿತು ಪೊಲೀಸ್ ಇಲಾಖೆಗೆ ಅಗತ್ಯ ಮಾಹಿತಿ ನೀಡಬೇಕು. ಮೆರವಣಿಗೆಯ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಎಲ್ಲರೂ ಸಹಕರಿಸಬೇಕು ಎಂದು ತಿಳಿಸಲಾಯಿತು.

ಹಬ್ಬದ ಆಚರಣೆಯ ವೇಳೆ ಅಶ್ಲೀಲ ಹಾಡುಗಳನ್ನು ಹಾಕಬಾರದು, ಪ್ರಚೋದನಕಾರಿ ಘೋಷಣೆಗಳನ್ನು ಕೂಗಬಾರದು ಹಾಗೂ ಯಾವುದೇ ಧರ್ಮ, ಜಾತಿ ಅಥವಾ ಸಮುದಾಯದ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ಚಟುವಟಿಕೆಗಳನ್ನು ನಡೆಸಬಾರದು ಎಂದು ಸೂಚಿಸಲಾಯಿತು. ಮದ್ಯಪಾನ ಸೇರಿದಂತೆ ಯಾವುದೇ ಕಾನೂನುಬಾಹಿರ ಚಟುವಟಿಕೆಗಳಿಗೆ ಅವಕಾಶ ನೀಡಬಾರದು ಎಂದು ಎಚ್ಚರಿಸಲಾಯಿತು. ಅಲ್ಲದೆ, ಧ್ವನಿವರ್ಧಕಗಳನ್ನು ಸರ್ಕಾರದ ನಿಯಮಾನುಸಾರ ಬಳಸಬೇಕು. Noise Pollution (Regulation and Control) Rules, 2000 ಹಾಗೂ Environment (Protection) Act, 1986ರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ತಿಳಿಸಲಾಯಿತು. ಗಣೇಶ ಮೂರ್ತಿಗಳ ಪ್ರತಿಷ್ಠಾಪನೆ ಮತ್ತು ವಿಸರ್ಜನೆಯ ಸಂದರ್ಭದಲ್ಲಿ ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಬೇಕು ಎಂದು ಸೂಚಿಸಲಾಯಿತು.

ಗಣೇಶ ಮೂರ್ತಿಯ ಪ್ರತಿಷ್ಠಾಪನಾ ಸ್ಥಳದಲ್ಲಿ ಸೂಕ್ತ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ಸಾರ್ವಜನಿಕರಿಗೆ ತೊಂದರೆಯಾಗದಂತೆ ಮೆರವಣಿಗೆ ನಡೆಸಬೇಕು ಹಾಗೂ ನಿಗದಿತ ಮಾರ್ಗ ಮತ್ತು ಸಮಯವನ್ನು ಪಾಲಿಸಬೇಕು. ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಸಂಘಟಕರು ಹಾಗೂ ಸಾರ್ವಜನಿಕರು ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಲಾಯಿತು. ವಿಶೇಷವಾಗಿ, ಗಣೇಶೋತ್ಸವವು ಎಲ್ಲರ ಹಬ್ಬವಾಗಿದ್ದು, ಧಾರ್ಮಿಕ ಸೌಹಾರ್ದತೆ ಮತ್ತು ಶಾಂತಿ ಕಾಪಾಡುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

ಹಾಗೂ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸುವ ವಿವಿಧ ಗ್ರಾಮಗಳ ಗುರುಹಿ–ರಿಯರು, ಯುವಕರು, ಮುಖಂಡರು ಹಾಗೂ ಇತರರು ಸಭೆಯಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಪೊಲೀಸ್ ಠಾಣೆಯ ಅಧಿಕಾರಿಗಳಾದ ಗುರುರಾಜ್ ಕುಲಕರ್ಣಿ, ಕನಕಪ್ಪ, ವೆಂಕಟೇಶ ಕಾಳಗಿ, ಮಂಜುನಾಥ, ಅರ್ಜುನ್, ಸರ್ವೇಶ್ ಹಾಗೂ ರವಿಶಂಕರ್ ಉಪಸ್ಥಿತರಿದ್ದರು. ಗಣೇಶೋತ್ಸವದ ಮೆರವಣಿಗೆ, ಧ್ವನಿವರ್ಧಕ ಬಳಕೆ, ಪರಿಸರ ಸಂರಕ್ಷಣೆ, ಕಾನೂನು ಸುವ್ಯವಸ್ಥೆ ಹಾಗೂ ಶಾಂತಿ ಕಾಪಾಡುವ ಕುರಿತು ಹಲವು ಮಾರ್ಗಸೂಚಿಗಳನ್ನು ನೀಡಲಾಯಿತು.

# ಎಪಿಎಂಸಿ ಮಾರುಕಟ್ಟೆ ಗಡಿ ವಿವಾದ: ಸಾರ್ವಜನಿಕರ ಆಕ್ರೋಶ

## ಗೋಡೆ ತೆರವುಗೊಳಿಸಿ, ಇಲ್ಲವೇ ಸಂಪೂರ್ಣ ಹದ್ದುಬಸ್ತು ಮಾಡಿ: ಸಾರ್ವಜನಿಕರ ಒತ್ತಾಯ

**ಅ.ಶ. ಸುದ್ದಿ ಕನಕಗಿರಿ**

**ಕನಕಗಿರಿ: ತಾಲೂಕಿನ ಎಪಿಎಂಸಿ ಮಾರುಕಟ್ಟೆಯಲ್ಲಿ ವಾಣಿಜ್ಯ ಮಳಿಗೆಗಳ ಹರಾಜು ಪ್ರಕ್ರಿಯೆ ನಡೆಯುತ್ತಿರುವ ಸಂದರ್ಭದಲ್ಲಿ, ಮಾರುಕಟ್ಟೆಯ ಗಡಿ ಹಾಗೂ ತಡೆಗೋಡೆ ವಿಚಾರವಾಗಿ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ ಘಟನೆ ನಡೆದಿದೆ. ಎಪಿಎಂಸಿ ಮಾರುಕಟ್ಟೆ ಆವರಣದ ತಡೆಗೋಡೆಯನ್ನು ತೆರವುಗೊಳಿಸಬೇಕು. ಇಲ್ಲವಾದರೆ ಸಂಪೂರ್ಣ ಎಪಿಎಂಸಿ ಮಾರುಕಟ್ಟೆಯ ಹದ್ದುಬಸ್ತು ಗುರುತಿಸಿ ಶಾಶ್ವತ ತಡೆಗೋಡೆ ನಿರ್ಮಿಸಬೇಕು ಎಂದು ಸಾರ್ವಜನಿಕರು ಎಪಿಎಂಸಿ ಕಾರ್ಯದರ್ಶಿ ಹಾಗೂ ಅಧಿಕಾರಿಗಳನ್ನು ಒತ್ತಾಯಿಸಿದರು.**

ಈಗಾಗಲೇ ಕೆಲವು ದಲ್ಲಾಳಿಗಳಿಗೆ ವಾಣಿಜ್ಯ ಮಳಿಗೆಗಳನ್ನು ನೀಡಲಾಗಿದ್ದು, ಮಾರುಕಟ್ಟೆಯ ಗಡಿ ಹಾಗೂ ತಡೆಗೋಡೆಯ ಹದ್ದುಬಸ್ತನ್ನು ಮೀರಿ ಕೆಲವು ಕಾಮಗಾರಿಗಳು ನಡೆದಿವೆ ಎಂದು ಸಾರ್ವಜನಿಕರು ಆರೋಪಿಸಿದರು. ಈ ಬಗ್ಗೆ ಸೂಕ್ತ ಪರಿಶೀಲನೆ ನಡೆಸಿ, ನಿಯಮಾನುಸಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.







ಈ ವಿಚಾರವಾಗಿ ಸಾರ್ವಜನಿಕರು ಹಾಗೂ ಎಪಿಎಂಸಿ ಅಧಿಕಾರಿಗಳ ನಡುವೆ ಮಾತಿನ ಚಕಮಕಿ ನಡೆಯಿತು. ಸಮಸ್ಯೆಯನ್ನು ಕೂಡಲೇ ಬಗೆಹರಿಸುವಂತೆ ಸಾರ್ವಜನಿಕರು ಪಟ್ಟು ಹಿಡಿದರು.

> **“ ಈಗಾಗಲೇ ಹಲವಾರು ಬಾರಿ ನಮ್ಮ ಸಂಘಟನೆ ವತಿಯಿಂದ ಮನವಿ ಮಾಡಿದ್ದರು ಮತ್ತು ಅನೇಕ ಬಾರಿ ಪತ್ರಿಕೆಯಲ್ಲಿ ಎಪಿಎಂಸಿ ತಡೆಗೋಡೆಯ ಸಂಬಂಧ ಪಟ್ಟ ಹಾಗೆ ವರದಿಯಾಗಿದ್ದು ಆದರೂ ಅಧಿಕಾರಿಗಳು ನಿರ್ಲಕ್ಷ ವಹಿಸುತ್ತಿದ್ದಾರೆ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡುತ್ತೇನೆ**
> **ಗಣೇಶ್ ರೆಡ್ಡಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷರು.**

ಇದಕ್ಕೆ ಪ್ರತಿಕ್ರಿಯಿಸಿದ ಅಧಿಕಾರಿಗಳು, ಗೋಡೆ ನಿರ್ಮಾಣ ಮಾಡಬೇಕೋ ಅಥವಾ ತೆರವುಗೊಳಿಸಬೇಕೋ ಎಂಬ ಕುರಿತು ಮೇಲಧಿಕಾರಿಗಳಿಗೆ ಪತ್ರ ಬರೆದು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಆದರೆ ಅಧಿಕಾರಿಗಳ ಭರವಸೆಯಿಂದ ಸಮಾಧಾನಗೊಳ್ಳದ ಸಾರ್ವಜನಿಕರು, ಸಮಸ್ಯೆ ಹಲವು ದಿನಗಳಿಂದ ಗೊಂದಲಕ್ಕೆ ಕಾರಣವಾಗಿದ್ದು, ತಕ್ಷಣ ಸ್ಥಳ ಪರಿಶೀಲನೆ ನಡೆಸಿ ಸ್ಪಷ್ಟವಾದ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

> **“ ಈಗಾಗಲೇ ಮೇಲಧಿಕಾರಿಗಳಿಗೆ ಪತ್ರ ಬರೆದಿರುತ್ತೇವೆ ಅವರ ಆದೇಶ ಅನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು.**
> **ಸಾವಿತ್ರಿ ಎಸ್ ಪಾಟೀಲ್ ಎಪಿಎಂಸಿ ಸೆಕ್ರೆಟರಿ ಕನಕಗಿರಿ.**

ಸ್ಥಳದಲ್ಲಿ ಪರಿಸ್ಥಿತಿ ಬಿಗಡಾಯಿಸುವ ಸಾಧ್ಯತೆ ಕಂಡುಬಂದ ಹಿನ್ನೆಲೆಯಲ್ಲಿ ಅಧಿಕಾರಿಗಳು ಸಾರ್ವಜನಿಕರನ್ನು ಸಮಾಧಾನಪಡಿಸಲು ಹರಸಾಹಸಪಟ್ಟರು. ಯಾವುದೇ ವ್ಯಕ್ತಿ ಅಥವಾ ದಲ್ಲಾಳಿಗೆ ಅನುಕೂಲವಾಗುವ ರೀತಿಯಲ್ಲಿ ಕ್ರಮ ಕೈಗೊಳ್ಳದೆ, ಎಪಿಎಂಸಿ ಮಾರುಕಟ್ಟೆಯ ಸಂಪೂರ್ಣ ಗಡಿ ಗುರುತಿಸಿ ಸಾರ್ವಜನಿಕರಿಗೆ ಸ್ಪಷ್ಟತೆ ನೀಡಬೇಕು ಎಂದು ಸ್ಥಳೀಯರು ಆಗ್ರಹಿಸಿದರು.

ತಡೆಗೋಡೆಯನ್ನು ಸಂಪೂರ್ಣವಾಗಿ ತೆರವುಗೊಳಿಸಬೇಕು; ಇಲ್ಲವಾದರೆ ಮಾರುಕಟ್ಟೆಯ ಸಂಪೂರ್ಣ ಹದ್ದುಬಸ್ತು ಗುರುತಿಸಿ ಶಾಶ್ವತ ತಡೆಗೋಡೆ ನಿರ್ಮಿಸಬೇಕು. ಈ ಕುರಿತು ಅಧಿಕಾರಿಗಳು ವಿಳಂಬ ಮಾಡದೆ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

## ಮುದಗಲ್ ವಾರ್ಡ್ 1ರಲ್ಲಿ ಮೂಲಸೌಕರ್ಯ ಕೊರತೆ ಸಮಸ್ಯೆ ಪರಿಹಾರಕ್ಕೆ ಎಐಎಂಐಎಂ ಆಗ್ರಹ

**ಅ.ಶ. ಸುದ್ದಿ ಮುದಗಲ್**

**ಮುದಗಲ್: ಪಟ್ಟಣದ ವಾರ್ಡ್ ನಂ. 1ರಲ್ಲಿ ಕುಡಿಯುವ ನೀರು, ಬೀದಿ ದೀಪ ಹಾಗೂ ಸಾರ್ವಜನಿಕ ಶೌಚಾಲಯದ ಅವ್ಯವಸ್ಥೆಯಿಂದ ನಿವಾಸಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಹಲವು ಬಾರಿ ಮನವಿ ಸಲ್ಲಿಸಿದರೂ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ಎಐಎಂಐಎಂ ಮುದಗಲ್ ಘಟಕ ಅಸಮಾಧಾನ ವ್ಯಕ್ತಪಡಿಸಿದೆ. ವಾರ್ಡ್‌ನಲ್ಲಿರುವ ಭಾವಿಗೆ ತ್ಯಾಜ್ಯ ವಸ್ತುಗಳು ಬಿದ್ದ ಪರಿಣಾಮ ನೀರು ಕಲುಷಿತಗೊಂಡಿದ್ದು, ಬಳಕೆಗೆ ಯೋಗ್ಯವಾಗದ ಸ್ಥಿತಿ ನಿರ್ಮಾಣವಾಗಿದೆ. ಭಾವಿಗೆ ಅಳವಡಿಸಲಾಗಿದ್ದ ಮೋಟಾರ್ ಕೂಡ ಕೆಟ್ಟುಹೋಗಿದ್ದು, ದುರಸ್ತಿ ಕಾರ್ಯ ಕೈಗೊಳ್ಳದಿರುವುದು ಸಮಸ್ಯೆಯನ್ನು ಮತ್ತಷ್ಟು ಗಂಭೀರಗೊಳಿಸಿದೆ.**




ಇದರ ಜೊತೆಗೆ ವಾರ್ಡ್‌ಗೆ 12–13 ದಿನಗಳಿಗೊಮ್ಮೆ ಮಾತ್ರ ಕುಡಿಯುವ ನೀರು ಪೂರೈಕೆಯಾಗುತ್ತಿದೆ ಎಂದು ನಿವಾಸಿಗಳು ದೂರಿದ್ದಾರೆ. ಇದರಿಂದ ಜನರು ಕುಡಿಯುವ ನೀರಿಗಾಗಿ ಪರದಾಡುವಂತಾಗಿದೆ. ಬೇಸಿಗೆಯ ದಿನಗಳಲ್ಲಿ ನೀರಿನ ಸಮಸ್ಯೆ ಮತ್ತಷ್ಟು ತೀವ್ರಗೊಳ್ಳುವ ಆತಂಕವೂ ಎದುರಾಗಿದೆ. ಬೀದಿ ದೀಪವಿಲ್ಲದೆ ಕತ್ತಲೆ ವಾರ್ಡ್‌ನ ಹಲವು ಪ್ರದೇಶಗಳಲ್ಲಿ ಬೀದಿ ದೀಪಗಳ ವ್ಯವಸ್ಥೆ ಇಲ್ಲದ ಕಾರಣ ರಾತ್ರಿ ವೇಳೆ ಸಾರ್ವಜನಿಕರು ಸಂಚರಿಸಲು ಭಯಪಡುವಂತಾಗಿದೆ. ಮಹಿಳೆಯರು, ಮಕ್ಕಳು ಹಾಗೂ ವೃದ್ಧರಿಗೆ ರಾತ್ರಿ ಸಂಚಾರದಲ್ಲಿ ತೊಂದರೆಯಾಗುತ್ತಿದ್ದು, ತಕ್ಷಣ ಬೀದಿ ದೀಪಗಳನ್ನು ಅಳವಡಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ. ಶೌಚಾಲಯಕ್ಕೂ ನೀರು, ಬೆಳಕಿನ ಕೊರತೆ ಪುರಸಭೆಯಿಂದ ನಿರ್ಮಿಸಿರುವ ಸಾರ್ವಜನಿಕ ಶೌಚಾಲಯಕ್ಕೂ ಸಮರ್ಪಕ ನೀರಿನ ಪೂರೈಕೆ ಇಲ್ಲ. ಅಲ್ಲದೆ ವಿದ್ಯುತ್ ದೀಪದ ವ್ಯವಸ್ಥೆಯೂ ಇಲ್ಲದಿರುವುದರಿಂದ ಶೌಚಾಲಯ ಸಾರ್ವಜನಿಕ ಬಳಕೆಗೆ ತೊಂದರೆಯಾಗಿದೆ. ಶೌಚಾಲಯದ ಸುತ್ತಮುತ್ತ ಜಾಲಿಮುಳ್ಳು ಹಾಗೂ ಕಳೆಗಿಡಗಳು ಬೆಳೆದು ಸ್ವಚ್ಛತೆ ಕೊರತೆಯಿಂದ ಅನೈರ್ಮಲ್ಯ ವಾತಾವರಣ ನಿರ್ಮಾಣವಾಗಿದೆ. ಇದರಿಂದ ಸೊಳ್ಳೆ, ಕೀಟಗಳು ಹೆಚ್ಚಾಗಿ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಇದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ. ಈ ಕುರಿತು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಶಾಶ್ವತ ಪರಿಹಾರ ದೊರೆತಿಲ್ಲ ಎಂದು ಎಐಎಂಐಎಂ ಮುದಗಲ್ ಘಟಕದ ಅಧ್ಯಕ್ಷರು ತಿಳಿಸಿದ್ದಾರೆ. ವಾರ್ಡ್ ನಂ. 1ರ ಸಮಸ್ಯೆಗಳನ್ನು ತುರ್ತಾಗಿ ಪರಿಶೀಲಿಸಿ, ಭಾವಿಯ ಸ್ವಚ್ಛತೆ ಹಾಗೂ ಮೋಟಾರ್ ದುರಸ್ತಿ, ನಿಯಮಿತ ಕುಡಿಯುವ ನೀರಿನ ಪೂರೈಕೆ, ಅಗತ್ಯವಿರುವ ಕಡೆಗಳಲ್ಲಿ ಬೀದಿ ದೀಪ ಅಳವಡಿಕೆ, ಸಾರ್ವಜನಿಕ ಶೌಚಾಲಯಕ್ಕೆ ನೀರು ಮತ್ತು ವಿದ್ಯುತ್ ವ್ಯವಸ್ಥೆ ಕಲ್ಪಿಸುವುದರ ಜೊತೆಗೆ ಸ್ವಚ್ಛತಾ ಕಾರ್ಯ ಕೈಗೊಳ್ಳಬೇಕು ಎಂದು ಅವರು ಪುರಸಭೆ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ. ಸಾರ್ವಜನಿಕರ ಮೂಲಭೂತ ಅಗತ್ಯಗಳಾದ ಕುಡಿಯುವ ನೀರು, ಸ್ವಚ್ಛತೆ ಮತ್ತು ಬೆಳಕಿನ ವ್ಯವಸ್ಥೆಯನ್ನು ಕಲ್ಪಿಸುವಲ್ಲಿ ಯಾವುದೇ ನಿರ್ಲಕ್ಷ್ಯ ತೋರದೆ, ವಾರ್ಡ್ ನಂ. 1ರ ನಿವಾಸಿಗಳ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಬೇಕು ಎಂದು ಎಐಎಂಐಎಂ ಮುದಗಲ್ ಘಟಕ ಆಗ್ರಹಿಸಿದೆ.

## ನಿರಂತರ ವಿದ್ಯುತ ಆಗ್ರಹಿಸಿ ರೈತರಿಂದ ಹೆಸ್ಕಾಂ ಕಚೇರಿಗೆ ಬೀಗ

**ಅ.ಶ. ಸುದ್ದಿ ಇಂಡಿ**

**ಇಂಡಿ: ರೈತರಿಗೆ ನಿರಂತರ ಹಗಲು ಹೊತ್ತು ಏಳು ತಾಸು ವಿದ್ಯುತ್ ಆಗ್ರಹಿಸಿ ಇಂದು ರೈತರು ಹೆಸ್ಕಾಂ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ಮಾಡಿದರು. ಶಿರಶ್ಯಾಡದ ರೈತ ಮುಖಂಡ ಬಾಳು ಮುಳಜಿ ಮಾತನಾಡಿ ವಿದ್ಯುತ್ ಸರಬರಾಜಿನಲ್ಲಿ ಪದೇ ಪದೇ ವ್ಯತ್ಯಯ ಉಂಟಾಗಿ ರೈತರಿಗೆ ತೊಂದರೆಯಾಗುತ್ತಿದೆ.**

ಅದಲ್ಲದೆ ರಾತ್ರಿ ಮೂರು ಗಂಟೆಯಿನಿಂದ ಬೆಳಗ್ಗೆ 10 ಗಂಟೆಯ ವರೆಗೆ ವಿದ್ಯುತ್ ನೀಡುವದರಿಂದ ರೈತರಿಗೆ ತೊಂದರೆ ಅನುಭವಿಸಬೇಕಾಗುತ್ತದೆ. ರಾತ್ರಿ 10 ಗಂಟೆಯ ನಂತರ ಸಿಂಗಲ್ ಫೇಜ್ ವಿದ್ಯುತ ನೀಡುವದರಿಂದ ಮತ್ತು ಅನೇಕ ಕಡೆ ವಿದ್ಯುತ ವ್ಯತ್ಯಯ ಮಾಡುವದರಿಂದ ವಿದ್ಯಾರ್ಥಿಗಳಿಗೆ ಓದಲು



ತೊಂದರೆಯಾಗುತ್ತಿದೆ. ವಿದ್ಯುತ ವ್ಯವಸ್ಥೆ ಸರಿಯಾಗಿ ಮಾಡ ಬೇಕೆಂದು ಆಗ್ರಹಿಸಿ ಹೆಸ್ಕಾಂ ಕಚೇರಿಗೆ ಬೀಗ ಹಾಕಿ ಪ್ರತಿಭಟಿಸಿದರು. ರೈತರು ಬರಗಾಲ ಎದುರಿಸುತ್ತಿದ್ದು ಮಳೆಯಿಲ್ಲದೆ ತೊಂದರೆಯಲ್ಲಿದ್ದಾರೆ. ಕೃಷ್ಣಾ ಕಾಲುವೆ ನೀರು ಬಿಡಬೇಕಂದರೆ ವಿದ್ಯುತ್ ತೊಂದರೆ ರೈತರು ಅನುಭವಿಸುತ್ತಿದ್ದಾರೆ ಎಂದರು. ಅಧಿಕಾರಿ ಘಟನಾ ಸ್ಥಳಕ್ಕೆ ಬಂದು ನಿರಂತರ ಹಗಲು ಏಳು ಗಂಟೆ ವಿದ್ಯುತ್ ನೀಡುವ ಭರವಸೆಯ ಮೇರೆಗೆ ಕಚೇರಿಯ ಬೀಗ ತೆಗೆದರು. ಸುಮಾರು 500 ಕ್ಕೂ ಹೆಚ್ಚು ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಅನೀಲಗೌಡ ಬಿರಾದಾರ, ಭೀಮಾಶಂಕರ ಮಸಳಿ, ಅಶೋಕ ಅಕಲಾದಿ, ಪ್ರಶಾಂತ ಲಾಳಸಂಗಿ, ಮಲ್ಲು ದೇವರ, ರಾಮು ಮೇತ್ರಿ, ರಾಜು ಕಟಕದೊಂಡ, ಮೋಹನ ಮೇತ್ರಿ, ಕುಮಾರ ಪ್ರಚಂಡಿ, ಬಾಗೇಶ ಎಚ್, ಪ್ರಶಾಂತ ಅವಟಿ, ಜ್ಯೋತಿಬಾ ಕದಮ್, ದಶರಥ ಕದಮ, ಇರಸಂಗಪ್ಪ ನೂಲೂರ ಮತ್ತಿತರಿದ್ದರು.

## ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ಎಚ್ಚರಿಕೆ: ಜಿಲ್ಲಾಧಿಕಾರಿ



**ಅ.ಶ. ಸುದ್ದಿ ವಿಜಯಪುರ**

**ವಿಜಯಪುರ: ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ–2026 (ಎಸ್ಐಆರ್) ಪ್ರಕ್ರಿಯೆಯಲ್ಲಿ ಯಾವುದೇ ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಅಧಿಕಾರಿಗಳು ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಸೂಚಿಸಿದರು.**

ಜಿಲ್ಲಾಧಿಕಾರಿ ಕಚೇರಿಯ ಕೇಸ್ವಾನ್ ಸಭಾಂಗಣದಲ್ಲಿ ನಡೆದ ವಿಡಿಯೋ ಸಂವಾದ ಸಭೆಯಲ್ಲಿ ಮಾತನಾಡಿದ ಅವರು, ಆಗಸ್ಟ್ 24ರಂದು ಕರಡು ಮತದಾರರ ಪಟ್ಟಿ ಪ್ರಕಟಿಸಲಾಗಿದ್ದು, ಪಟ್ಟಿಯಲ್ಲಿ ಹೆಸರು ಬಿಟ್ಟುಹೋಗಿರುವ ಅರ್ಹರು ಹಾಗೂ ಹೊಸದಾಗಿ ಸೇರ್ಪಡೆಯಾಗಲು ಬಯಸುವವರಿಗೆ ಸೆ.23ರವರೆಗೆ ಅರ್ಜಿ ಸಲ್ಲಿಸಲು ಅವಕಾಶವಿದೆ ಎಂದರು. ಮಾಹಿತಿ ತಾರ್ಕಿಕವಾಗಿ ಹೊಂದಾಣಿಕೆಯಾಗದ ಹಾಗೂ 2002ರ ಮತದಾರರ ಪಟ್ಟಿಗೆ ಮ್ಯಾಪಿಂಗ್ ಆಗದ ಜಿಲ್ಲೆಯ ಒಟ್ಟು 24,524 ಮತದಾರರಿಗೆ ಸಂಬಂಧಿಸಿದಂತೆ ವಿಚಾರಣೆ ಪ್ರಕ್ರಿಯೆ ನಡೆಯುತ್ತಿದೆ.

ನೋಟಿಸ್ ಪಡೆದ ಮತದಾರರು ನಿಗದಿತ ದಿನಾಂಕದಂದು ಅಗತ್ಯ ದಾಖಲೆಗಳೊಂದಿಗೆ ವಿಚಾರಣೆಗೆ ಹಾಜರಾಗಬೇಕು. ದಾಖಲೆ ನೀಡದಿರುವ ಒಂದೇ ಕಾರಣಕ್ಕೆ ತಕ್ಷಣ ನಿರ್ಧಾರ ಕೈಗೊಳ್ಳದೆ, ಅಗತ್ಯವಿದ್ದಲ್ಲಿ ಮತ್ತೊಂದು ಅವಕಾಶ ನೀಡಬೇಕು ಎಂದು ಸೂಚಿಸಿದರು. ಸೆ.19 ಮತ್ತು 20ರಂದು ವಿಶೇಷ ಆಂದೋಲನ ಕರಡು ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದ ಅರ್ಹ ಮತದಾರರು ಹಾಗೂ ಅಕ್ಟೋಬರ್ 1, 2026ಕ್ಕೆ 18 ವರ್ಷ ಪೂರ್ಣಗೊಳಿಸುವ ಯುವ ಮತದಾರರ ಅನುಕೂಲಕ್ಕಾಗಿ ಸೆ.19 ಮತ್ತು 20ರಂದು ಜಿಲ್ಲೆಯ ಎಲ್ಲ ಮತಗಟ್ಟೆಗಳಲ್ಲಿ ವಿಶೇಷ ಆಂದೋಲನ ನಡೆಯಲಿದೆ.

ಈ ದಿನಗಳಲ್ಲಿ ಬಿಎಲ್‌ಒಗಳು ಮತಗಟ್ಟೆಗಳಲ್ಲಿ ಲಭ್ಯವಿರಲಿದ್ದು, ಸಾರ್ವಜನಿಕರು ನೇರವಾಗಿ ಭೇಟಿ ನೀಡಿ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಬಹುದು. ಹೊಸ ಮತದಾರರ ಸೇರ್ಪಡೆಗೆ ನಮೂನೆ–6, ಹೆಸರು ತೆಗೆದುಹಾಕಲು ನಮೂನೆ–7 ಹಾಗೂ ವಿಳಾಸ ಬದಲಾವಣೆ, ಹೆಸರು ತಿದ್ದುಪಡಿ ಮತ್ತು ಗುರುತಿನ ಚೀಟಿ ಬದಲಾವಣೆಗೆ ನಮೂನೆ–8 ಮೂಲಕ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿಯೂ ಅರ್ಜಿ ಸಲ್ಲಿಸಲು ಅವಕಾಶವಿದೆ.

## ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಜಿಲ್ಲಾಧಿಕಾರಿಗಳ ಸಭೆ

**ಅ.ಶ. ಸುದ್ದಿ ವಿಜಯಪುರ**

**ಕೊಪ್ಪಳ: ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ 2026ರ (ಎಸ್.ಐ.ಆರ್) ಕರಡು ಮತದಾರರ ಪಟ್ಟಿ ಪ್ರಕಟಣೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್ 09ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಮಾನ್ಯತೆ ಪಡೆದ ಮತ್ತು ನೋಂದಾಯಿತ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆ ನಡೆಯಿತು.**

ಇದೇ ವೇಳೆ ಜಿಲ್ಲಾಧಿಕಾರಿಗಳು ಮಾತನಾಡಿ, ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ 01.10.2026ರ ಅರ್ಹತಾ ದಿನಾಂಕಕ್ಕೆ ಅನ್ವಯಿಸುವಂತೆ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ 2026ರ ಪ್ರಕ್ರಿಯೆ ಕೈಗೊಳ್ಳಲಾಗಿದ್ದು, ಕರಡು ಮತದಾರರ ಪಟ್ಟಿಯನ್ನು ದಿನಾಂಕ 24.08.2026 ರಂದು ಪ್ರಕಟಿಸಲಾಗಿದೆ. ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು 24.08.2026 ರಿಂದ 23.09.2026 ರವರೆಗೆ ಅವಕಾಶ ಕಲ್ಪಿಸಲಾಗಿದ್ದು, 27.10.2026 ರಂದು ಅಂತಿಮ ಮತದಾರರ ಪಟ್ಟಿ ಪ್ರಕಟವಾಗಲಿದೆ ಎಂದರು.

ಈಗಾಗಲೇ ಜಿಲ್ಲೆಯ ಎಲ್ಲಾ ಬಿಎಲ್‌ಒಗಳು ಮನೆ ಮನೆಗೆ ಭೇಟಿ ನೀಡಿ ಗಣತಿ ನಮೂನೆಗಳನ್ನು ವಿತರಿಸಿದ್ದಾರೆ. ಜಿಲ್ಲೆಯ ಒಟ್ಟು 11,90,214 ಮತದಾರರ ಪೈಕಿ 10,41,388 (ಶೇ. 87.50) ಮತದಾರರ ವಿವರಗಳನ್ನು ಡಿಜಿಟಲೀಕರಣ ಮಾಡಲಾಗಿದೆ ಎಂದು ಹೇಳಿದರು.



ಕರಡು ಪಟ್ಟಿಯ ಅಂಕಿ–ಅಂಶ: ಪ್ರಕಟಿತ ಕರಡು ಮತದಾರರ ಪಟ್ಟಿಯಲ್ಲಿ 5,19,142 ಪುರುಷರು, 5,22,189 ಮಹಿಳೆಯರು ಹಾಗೂ 57 ಇತರೆ ಸೇರಿದಂತೆ ಒಟ್ಟು 10,41,388 ಮತದಾರರಿದ್ದಾರೆ. ಜಿಲ್ಲೆಯಲ್ಲಿ 1200ಕ್ಕೂ ಹೆಚ್ಚು ಮತದಾರರಿರುವ ಮತಗಟ್ಟೆಗಳ ರಾಷನಲೈಜೇಷನ್ ಪ್ರಕ್ರಿಯೆ ನಡೆಸಿ, ಜಿಲ್ಲೆಯಲ್ಲಿ ಹೊಸದಾಗಿ 37 ಮತಗಟ್ಟೆಗಳನ್ನು ಹೆಚ್ಚಿಸಲಾಗಿದ್ದು, ಇದರಿಂದಾಗಿ ಒಟ್ಟು ಮತಗಟ್ಟೆಗಳ ಸಂಖ್ಯೆ 1,315 ರಿಂದ 1,352ಕ್ಕೆ ಏರಿಕೆಯಾಗಿದೆ ಎಂದರು.

ನೋಟಿಸ್ ಜಾರಿ ಮತ್ತು ವಿಚಾರಣೆ: ಹಿಂದಿನ ಸಮಗ್ರ ಪರಿಷ್ಕರಣೆಯ ಮಾಹಿತಿಯನ್ನು ನೀಡದ ಹಾಗೂ ಮಾಹಿತಿ ತಾಳೆಯಾಗದ ಅಥವಾ ಲೋಪದೋಷಗಳು ಕಂಡುಬಂದಿರುವ 14,401 ಮತದಾರರಿಗೆ ನೋಟಿಸ್ ನೀಡಲಾಗುತ್ತಿದ್ದು, ದಾಖಲೆಗಳ ಪರಿಶೀಲನೆ ಹಾಗೂ ವಿಚಾರಣೆಗೆ ಹೆಚ್ಚುವರಿ ಅಧಿಕಾರಿಗಳನ್ನು ನೇಮಿಸಲಾಗಿದೆ ಎಂದು ಅವರು ತಿಳಿಸಿದರು. ಕರಡು ಮತದಾರರ ಪಟ್ಟಿಯನ್ನು ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿ, ಇಆರ್‌ಒ/ಎಇಆರ್‌ಒ ಕಚೇರಿಗಳು, ಮತಗಟ್ಟೆಗಳು ಹಾಗೂ ವೆಬ್‌ಸೈಟ್ https://koppal.nic.in/en/election/ ನಲ್ಲಿ ಪ್ರಚುರಪಡಿಸಲಾಗಿರುತ್ತದೆ.

ಹೆಸರು ಸೇರ್ಪಡೆಗೆ ನಮೂನೆ–6, ಹೆಸರು ತೆಗೆದು ಹಾಕಲು ನಮೂನೆ–7 ಮತ್ತು ತಿದ್ದುಪಡಿ ಅಥವಾ ಸ್ಥಳಾಂತರಕ್ಕೆ ನಮೂನೆ–8ರ ಮೂಲಕ ಆನ್‌ಲೈನ್ ಅಥವಾ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿಗಳು ಹೇಳಿದರು. ಸಭೆಯಲ್ಲಿ ಜಿಲ್ಲಾ ಚುನಾವಣಾ ತಹಶೀಲ್ದಾರರಾದ ರವಿ ವಸ್ತ್ರದ್, ಜಿಲ್ಲೆಯ ಮಾನ್ಯತೆ ಪಡೆದ ಮತ್ತು ನೋಂದಾಯಿತ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಕೃಷ್ಣ ಇಟ್ಟಂಗಿ, ಸೇರಿದಂತೆ ಮತ್ತಿತರರು ಹಾಗೂ ಜಿಲ್ಲಾ ಚುನಾವಣಾ ಶಾಖೆಯ ಇತರೆ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

### ‘ವಚನಾಮೃತ’

**ತಾವರೆಲೆ ಮೇಲೊಂದು ಹನಿ**
**ಹನಿಯೊಳಗೊಂದ್ ಬೆಳ್ಕು ಹೊಳೆಪುದ**
**ಕಂಡು ಹಿಗ್ಗಿತು ಮನ!.**
**ಹೊಳೆದ ಬೆಳ್ಕ ಪನಿ ತಾವರೆ**
**ಹೂಗಂಟದೆ ಶೂನ್ಯದತ್ತ ವಾಲಿದ**
**ಸೋಜಿಗ ಕಂಡೆಯ ಸತ್ಯವಾಣಿ!!.**



**ವಾಣಿ ಭಂಡಾರಿ.**

# ಲೇಖಕರ ದಿನಚರಿ...

## ಬದುಕು ವರ್ತಮಾನದಲ್ಲಿದೆ



ಕಳೆದು ನಿನ್ನೆಯ ನೀನು ಗುಣಿಸದಿರು ನಾಳೆಯನು; ಕೂಡಿ ನಿಂತರೆ ಭೂತ ಇಂದು ಸೊಗಸಲ್ಲ ಇರದುದನು ವಿಭಜಿಸುವುದಾವ ಲೆಕ್ಕಾಚಾರ? ವರ್ತಮಾನವೆ ಬೆರಗೊ! ಮುದ್ದುರಾಮ..... ಬದುಕಿನಲ್ಲಿ ವರ್ತಮಾನದಲ್ಲಿ ಬದುಕುವವರು ಬೆರಳೆಣಿಕೆಯಷ್ಟು ಜನ. ಅಸಂಖ್ಯಾತ ಜನರು ಭೂತ ಮತ್ತು ಭವಿತವ್ಯದಲ್ಲಿ ಆಸಕ್ತಿಯುಳ್ಳವರಾಗಿರುತ್ತಾರೆ. ಅನುಗಾಲ ಕಾಲ ನಮ್ಮೊಂದಿಗೆ ನೆರಳಿನಂತೆ ಚಲಿಸಿದರೂ ಅದರೊಂದಿಗೆ ಹೆಜ್ಜೆ ಜೋಡಿಸಲಾಗದೆ ಒದ್ದಾಡುವವರೇ ಬಹಳ ಜನ. ಬದುಕು ನಂದನವನ ವಾಗಲು ಹೊಸತನವನ್ನ ಅಳವಡಿಸಿಕೊಳ್ಳುವುದು ಅತ್ಯವಶ್ಯಕವಾಗಿದೆ. ಕಾಲ ಒಂದು ಪ್ರಶ್ನಾತೀತ ಅದರ ಬೆರಗನ್ನು ವೀಕ್ಷಿಸಲು ನಮ್ಮ ಎಚ್ಚರದ ನಡವಳಿಕೆ ಅತ್ಯವಶ್ಯವಾಗಿದೆ. ಸಮಯದ ಪ್ರಜ್ಞೆಯುಳ್ಳವನು ಪರಿವ್ರಾಜಕನಾಗಿರುತ್ತಾನೆ. ತನ್ನ ವಿವೇಚನೆ ವಿಸ್ತೃತಗೊಳಿಸುತ್ತಾ ವರ್ತಮಾನದಲ್ಲಿ ಬದುಕುತ್ತಾನೆ. ಪರಿಮಿತಿಯ ನಿಗಡಗಳ ಧರಿಸದೆ ಕಾಲನಿಗೂಢತೆಯನ್ನರಿತವನಾಗಿರುತ್ತಾನೆ. ಭವಿಷ್ಯವನ್ನು ನಿಗ್ರಹಿಸುವ ಸಾಮರ್ಥ್ಯವಿರದಿದ್ದರೂ ಕಾಲ ನಿಟ್ಟಿಸುವ ಧೈರ್ಯವುಳ್ಳವನಾಗಿರುತ್ತಾನೆ.

ಉದಾತ್ತತೆಯ ರೂಢಿ ಸಿಕೊಂಡವಗೆ ನಿತ್ಯವೂ ಶುಭದಿನ ವಾಗಿರುತ್ತದೆ. ನಿತ್ಯವೂ ಹೊಸತನ ಸ್ವಾ ಗತಿಸುತ್ತದೆ. ಸೃಷ್ಟಿಯ ಗತಿ ವಿಧಿಯು ಕಾಲಚಕ್ರದಲ್ಲ ಅಡಗಿರುವುದನ್ನು ಮನಗಂಡಿರುತ್ತಾನೆ. ಬದುಕು ನೀಡಿದ ಕಾಲದಡಿಯಲ್ಲಿ ನಿಟ್ಟೋಟವ ಹಾಕುತ್ತ ಪ್ರಸ್ತುತ ಗೌರವಿಸುವವನಾಗಿರುತ್ತಾನೆ. ನಿನ್ನೆ ,ಇಂದು, ನಾಳೆ ಇವುಗಳ ಜೋಡಿಸುವ ಕಲೆ ಇವನಿಗೆ ಕರಗತವಾಗಿರುತ್ತದೆ. ನಿತ್ಯ ಸತ್ಯವೆನ್ನುತ ನಿರಾಕುಲನಾಗಿರುತ್ತಾನೆ. ನಿರಪೇಕ್ಷಕನಾದ ಅವನ ನಿಲುವು ಸೂಜಿಗಲ್ಲಂತೆ ಆಕರ್ಷಿಸುತ್ತದೆ. ನಿರುಪಮಾನರು ಈ ಗತಿಯಲ್ಲಿ ನಡೆದಿರುವುದಕ್ಕೆ ಅವರನ್ನು ಅಸಾಧಾರಣರೆಂದು ಕಾಲ ನಿರೂಪಿಸುತ್ತದೆ. ಹಿಂದೆ ಒಬ್ಬ ರಾಜನಿದ್ದ ಅವನಿಗೆ ಸತತವಾಗಿ ಮೂರು ಪ್ರಶ್ನೆಗಳು ಕಾಡುತ್ತಿದ್ದವು ಅವು ಯಾವವು ಎಂದರೆ ಯಾವ ಘಳಿಗೆಗೆ ನಮ್ಮ ಮೊದಲ ಆದ್ಯತೆ ಇರಬೇಕು? ಎರಡನೆಯದಾಗಿ ಯಾವ ಕೆಲಸ ಪ್ರಮುಖವಾದದ್ದು ಮತ್ತು ಯಾರಿಗೆ ನಾವು ಪ್ರಾಮುಖ್ಯತೆ ಕೊಡಬೇಕು? ಎನ್ನುವ ಮೂರು ಪ್ರಶ್ನೆಗಳಿ ದ್ದವು.

ತನ್ನ ಆಸ್ಥಾನದಲ್ಲಿ ಅನೇಕ ವಿದ್ವಾಂಸರ ಕರೆಯಿಸಿ ಉತ್ತರ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದ. ಆದರೆ ಪ್ರತಿ ಬಾರಿ ಅವನಿಗೆ ನಿರಾಶೆ ಕಾದಿರುತ್ತಿತ್ತು. ಆಗ ಒಬ್ಬ ಮುದುಕನು ಉತ್ತರಿಸಬಲ್ಲನೆಂಬ ಉತ್ತರ ಸಿಕ್ಕಿತು. ಆಗ ಮಾರುವೇಷ ಧರಿಸಿ ರಾಜ ಅವನ ಹತ್ತಿರ ಧಾವಿಸಿದನು. ಅಲ್ಲಿ ಪ್ರಯಾಸದ ಪ್ರಯಾಣದ ನಂತರ ಆ ವೃದ್ಧನನ್ನು ಸಂಪರ್ಕಿಸಿದನು. ಶ್ರಮಜೀವಿಯಾದ ಮುದುಕ ಒಬ್ಬನೇ ಕೆಲಸ ಮಾಡುತ್ತಿದ್ದನು. ಅದನ್ನು ನೋಡಿದ ತಕ್ಷಣ ಅವನಿಗೆ ಸಹಾಯ ಮಾಡಲು ರಾಜ ಬಂದನು. ಮತ್ತು ಸಂಜೆಯವರೆಗೆ ಅವಿರತವಾಗಿ ಕಾರ್ಯ ಮಾಡಿ ಮುಗಿಸಿದನು. ಮುದುಕನ ಕಣ್ಣಲ್ಲಿ ನಿರ್ವಿ ಕಲ್ಪದ ನೋಟವಿತ್ತು.

ಸ್ವಲ್ಪ ವೇಳೆಗೆ ಅಲ್ಲಿ ಒಬ್ಬ ಗಾಯಗೊಂಡ ಮನುಷ್ಯ ಓಡಿಬಂದು ಇವರಿರುವಲ್ಲಿ ಬಿದ್ದುಬಿಟ್ಟನು. ರಾಜ ಅವನನ್ನು ಸಂತೈಸುತ್ತ ಚಿಕಿತ್ಸೆಸುತ್ತಿದ್ದನು. ಅವನ ಗಾಯ ಒರೆಸಿ ಅವನ ಸುಶ್ರುಷೆ ಮಾಡಿದನು. ಅವನ ನಿರ್ಜಳ ನಯನಗಳಲ್ಲಿ ಹೊಸ ಬೆಳಕು ಮೂಡಿತು ಮತ್ತು ಎದ್ದ ತಕ್ಷಣ ರಾಜನನ್ನು ನೋಡಿ ಕೃತಜ್ಞಸಿ ಕ್ಷಮೆಯಾಚಿಸಿದನು. ರಾಜನಿಗೆ ಗೋಜಲಾಯಿತು. ಏಕೆಂದು ಕೇಳಿದಾಗ ನನ್ನ ಆಸ್ತಿ ಕಸಿದು ಅಣ್ಣನನ್ನು ಕೊಂದದ್ದಕ್ಕಾಗಿ ನಿನ್ನನ್ನು ಕೊಲ್ಲಲು ಬಂದಿದ್ದೆ ನಿನಗಾಗಿ ಬಹಳ ಕಾಯುತ್ತಾ ನಿಂತಿದ್ದೆ ಆದರೆ ನೀನು ಇಲ್ಲಿ ವ್ಯಸ್ತವಾಗಿದ್ದರಿಂದ ನನ್ನ ಪ್ರಹಾರದಿಂದ ಬದುಕುಳಿದೆ ಆದರೆ ನಿನ್ನ ಸೈನಿಕರು ನನ್ನನ್ನು ಗಮನಿಸಿ ಶಿಕ್ಷಿಸಿದರು. ನಿನ್ನ ನ್ಯಾಯಯುಕ್ತ ಮತ್ತು ದಯಾಪರ ನಿಲುವು ಇಂದು ನನ್ನ ಕಣ್ತೆರೆಯಿಸಿದೆ. ನಾನು ಕ್ಷಮಪ್ರಾರ್ಥಿಯಾಗಿದ್ದೇನೆಂದು ಹೇಳಿದನು. ಆಗ ಅವನನ್ನು ಕ್ಷಮಿಸಿ ತನ್ನ ಉದ್ದೇಶ ಈಡೇರಿಕೆಗಾಗಿ ಆ ರಾಜ ಮತ್ತೆ ವೃದ್ಧನ ಬಳಿ ಹೋದನು. ಆಗ ವೃದ್ಧ ನಸುನಗುತ್ತ ನಿನ್ನೆಲ್ಲಾ ಪ್ರಶ್ನೆಗಳಿಗೆ ಉತ್ತರ ಈಗ ದೊರಕಿದೆಯಲ್ಲ ಅಂತ ಹೇಳಿದನು.. ಹೇಗೆ ಅಂತ ರಾಜ ಕೇಳಿದಾಗ... ಅಪರೋಕ್ಷವಾಗಿ ನಿನ್ನೆಲ್ಲಾ ಪ್ರಶ್ನೆಗಳಿಗೆ ಉತ್ತರ ದೊರಕಿದೆ ನೀನು ಇಲ್ಲಿ ಬಂದಾಗ ನನ್ನ ಸಹಾಯಕ್ಕಾಗಿ ಮುಂದೆ ಬಂದೆ ಅಂದಮೇಲೆ ದೀನದಲಿತ ಹಾಗೂ ಸಹಾಯ ಮಾಡಬೇಕಾದವರಿಗೆ ನಮ್ಮ ಮೊದಲ ಆದ್ಯತೆ ಇರಬೇಕು ಎಂದಾಯಿತು.

ನ್ಯಾಯಪರನಾಗಿದ್ದವಗೆ ವೈರಿಯಲ್ಲಿಯು? ಗುಣಗ್ರಾ ಹಿತ್ವ ಮಾತ್ರ ಆಕರ್ಶಿಸುತ್ತದೆ. ಹೀಗಾಗಿ ನೋವಿನಲ್ಲಿರುವವಗೆ ಸಹಾಯ ಮಾಡಿದೆ ಇದು ಆ ಕ್ಷಣದ ಬೇಡಿಕೆಯಾಗಿತ್ತು ಮೂರನೆಯದಾಗಿ ಸಮಯೋಚಿತ ನಿರ್ಧಾರವೇ ನೀತಿ ಮಾರ್ಗ ಹೀಗಾಗಿ ಬದುಕು ವರ್ತಮಾನದಲ್ಲ ಡಗಿದೆ. ಸಮಯದ ಔಚಿತ್ಯವನ್ನು ಅರಿತು ಅದರ ಪ್ರಕಾರ ಮಾಡಿದ ಕೆಲಸದಲ್ಲಿ ಫಲ ಪ್ರಾಪ್ತಿಯಾಗುತ್ತದೆ. ನಮ್ಮ ಮೊದಲ ಆದ್ಯತೆ ಕಣ್ಮುಂದೆ ಇರುವ ಕ್ಷಣದಲ್ಲಿದೆ. ಅದು ನಿಷ್ಕಾಮವಿರಬೇಕು, ನಿಷ್ಕಾಂಕ್ಷಿತವಾಗಿರಬೇಕು ಎಂದನು. ರಾಜನು ಸಂತೃಪ್ತನಾಗಿ ಉತ್ತರಗಳನ್ನು ಪಡೆದು ವಂದಿಸಿ ಹಿಂತಿರುಗಿದನು. ಸಮಯ ಯಾರ ಅಣತಿಗಾಗಿ ಕಾಯುವುದಿಲ್ಲ. ಸಮಯ ಪ್ರಜ್ಞೆ ಇದ್ದವರಿಗೆ ಎಲ್ಲವೂ ನವನವೀನ. ನಿಶ್ಚಿತ ಕಾರ್ಯಗಳಿಗೆ ನಿಷ್ಠೆಯಿಂದ ಕಾಲದ ಬೇಡಿಕೆಯನರಿತು ಸ್ಪಂದಿಸಿದಾಗ ವರ್ತಮಾನದೊಂದಿಗೆ ಭವಿಷ್ಯವನ್ನೂ ನಾವು ಸುಂದರವಾಗಿಸಬಹುದು ಅಲ್ಲವೇ?....



**ಆರತಿ ಏನ್ ರಾವ್**

## ಪುಟಿದೇಳುವ

ಮತ್ತೆ ಮತ್ತೆ ಪುಟಿದೇಳುವ
ಗತ್ತು ಮತ್ತಿಗೆ ವಿರಮಿಸಿ
ಸೋಲು ಗೆಲವು ಮತ್ತೆರದಂತೆ.

ಸುತ್ತಿಗೆ ಬಡಿತಕೆ ಮೆತ್ತಗಾಗದೇ
ಭಿತ್ತಿ ಪತ್ರದಿ ಮೂಡಿಬರುವೆ
ಹೊಸ ತನದ ದಿಗಂತದಂತೆ.

ಮುತ್ತಿನ ಸವಿಗೆ
ವಿಪತ್ತನು ಜಯಿಸಿ
ಅಪತ್ತಿನ ಮೇರೆ ಮೀರುವಂತೆ.



ಚಪಲ ಚಂಚಲ ಕಡೆಗಣಿಸಿ
ಧೃಢತೆಯ ಮೈಗೂಡಿಸಿ
ಸಮಭಾವ ಸವಿ ಲಹರಿ ಹಾಡುವಂತೆ

ಕಾಲದ ಜೊತೆಯಲಿ
ಅಂಧಕಾರ ಕಳೆಯುತ
ಜ್ಞಾನ ಕಣಜದಿ ಮಿಂದೇಳುವಂತೆ.

ಬಿದ್ದ ಜಾಗದಿ ಎದ್ದು
ಜಿದ್ದಾ ಜಿದ್ದಿನ ಕಣದಿ
ಮುದ್ದು ಮಾಡುವ ಸುದ್ದಿ ಜಾಹೀರಾತು
ಆದಂತೆ.

ಸಹಿಷ್ಣುತೆಯ ಸಾಕಾರ
ಪ್ರಯತ್ನದ ಬೀಜ ಬಿತ್ತಿ
ಸಮರ್ಪಣಾ ಭಾವ ಲಹರಿ ಫಲ ಬಿಟ್ಟಂತೆ.



**ರೇಷ್ಮಾ ಕಂದಕೂರ**

## 'ನೆನ್ನೆಗಳು'

ನೆನಪುಗಳನ್ನು ಬಿಸಿ ಮಾಡಿ
ಕಾಸಿಕೊಳ್ಳುತ್ತೇನೆ
ನಿನ್ನೊಂದಿಗೆ ಕಳೆದ ಅತಿಯಾದ
ತಂಪು ಕ್ಷಣಗಳ ಚೂರಿನ ಭಯದಿಂದ

ತಲೆ ದಿಂಬಿನ ಪಕ್ಕದಲ್ಲೇ ನೀರು
ಬಿಸಿಯಾದ ನೆನಪುಗಳ ದಾಳಿ
ಹೊದ್ದ ಕಂಬಳಿಯೂ ಚಳಿಗಾಗಿ ಅಲ್ಲ



ಕನಸ ಹನಿಗಳಿಂದ ಎದೆಯ ರಕ್ಷಣೆಗೆ

ಆ ತಿರುವಿನಲ್ಲಿ ಬಿದ್ದಿವೆ
ಒಡೆದ ಚಂದಿರನ ತುಂಡುಗಳು

ತುಸು ನಿರ್ಲಕ್ಷ್ಯ, ಅಲ್ಪ ಅಂತರದ
ಗಾಳಿ ಸ್ಫೋಟಗೊಂಡು

ಬಿದ್ದ ನೆನ್ನೆಗಳ ಎತ್ತಿ
ನೋಡುತ್ತಿದ್ದೇನೆ ನಿನ್ನ, ಅಂಗೈಯಲ್ಲೇ.
ತಲುಪಲಾರೇನು ಸನಿಹ
ನೀ ಎಸೆದ ಸತ್ಯವು ಬಲುದೂರ...



**ಮಹೇಶ್ ಜಿ.ಟಿ, ತಿಪಟೂರು.**

## ವೈದ್ಯರ 'ನಿಯಂತ್ರಣ' ಮೀರಿ ಹೋಗುತ್ತಿರುವ ಆರೋಗ್ಯ ಕ್ಷೇತ್ರ





ವೈದ್ಯರ ದಿನದ ಸಂದರ್ಭದಲ್ಲಿ ಅತ್ಯಂತ ಆತಂಕಕಾರಿ ಬೆಳವಣಿಗೆಯ ಬಗ್ಗೆ ನಾವು ಯೋಚಿಸಬೇಕಿದೆ. ಸಾಮಾನ್ಯವಾಗಿ ಅತ್ಯಂತ ಹೆಚ್ಚಿನ ಶ್ರಮದ ಓದು ಎಂದರೆ ಅದು ಡಾಕ್ಟರ್ ಆಗುವ ಪ್ರಕ್ರಿಯೆಯ ಓದು ಮತ್ತು ಅಧ್ಯಯನ. ಅತಿ ಹೆಚ್ಚು ಅಂಕಗಳಿಸುವ ವಿದ್ಯಾರ್ಥಿಗಳ ಮತ್ತು ಅವರ ಪೋಷಕರ ಮೊದಲ ಆಯ್ಕೆ ವೈದ್ಯಕೀಯ ವಿಜ್ಞಾನ. ಇತ್ತೀಚಿಗೆ ಸ್ವಲ್ಪ ಬದಲಾವಣೆ ಆಗುತ್ತಿದೆ. ಸಮಾಜದಲ್ಲಿ ಸಹಜವಾಗಿಯೇ ಹೆಚ್ಚು ಗೌರವ ಪಡೆಯುವ ವೃತ್ತಿ ಸಹ ವೈದ್ಯರದು. ಹಾಗೆಯೇ ಸಾವು ಬದುಕಿನ ಅತ್ಯಂತ ನಿರ್ಣಯಾತ್ಮಕ ಸಮಯದ ಕ್ಷಣದ ಹೊಣೆಗಾರಿಕೆಯೂ ವೈದ್ಯರದು. ಇಂತಹ ಮಹತ್ವದ ವೃತ್ತಿ ಈ ಸ್ಪರ್ಧಾತ್ಮಕ ಹಣಕಾಸಿನ ಸಮಾಜದಲ್ಲಿ ವೈದ್ಯರ ಕೈ ತಪ್ಪುತ್ತಿರುವುದು ತುಂಬಾ ಅಪಾಯಕಾರಿ.

ವೈದ್ಯರಲ್ಲದ ಕಾರ್ಪೊರೇಟ್ ಬಂಡವಾಳಗಾರರು ಸೇವೆ, ಶಿಸ್ತು, ಸ್ವಚ್ಚತೆಯ ಹೆಸರಿನಲ್ಲಿ ಬಹುತೇಕ ಜನರನ್ನು ಹಗಲು ದರೋಡೆ ಮಾಡುತ್ತಿದ್ದಾರೆ ಎಂದು ಕರೆಯಬಹುದಾದಷ್ಟು ಶೋಷಿಸುತ್ತಿದ್ದಾರೆ.

ವೈದ್ಯಕೀಯ ಶಿಕ್ಷಣ, ಲ್ಯಾಬೊರೇಟರಿ, ಔಷಧಿಗಳು, ಶಸ್ತ್ರಚಿಕಿತ್ಸೆಗಳು, ಜೀವ ವಿಮೆ, ತಪಾಸಣಾ ಶಿಬಿರಗಳು, ಐಸಿಯು, ಡಾಕ್ಟರ್ ಕನ್ಸಲ್ಟನ್ಸಿ ಸರ್ವೀಸಸ್, ಆಹಾರದ ಡಯಟ್, ಆಂಬುಲೆನ್ಸ್ ಸೇವೆ, ಹೀಗೆ ಸಾಲು ಸಾಲು ಆರೋಗ್ಯ ವಿಭಾಗಗಳಲ್ಲಿ ಹಣವೇ ಪ್ರಾಧಾನ್ಯತೆ ಪಡೆದು ವಂಚನೆಯ ಅನುಮಾನ ಬಲವಾಗುತ್ತಿದೆ.

" ವೈದ್ಯಕೀಯ ವಿಜ್ಞಾನ ಮುಂದುವರೆದಷ್ಟು ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ "ಎಂಬ ಮಾತು ಚಾಲ್ತಿಯಲ್ಲಿದೆ. ಅಂದರೆ ವೈದ್ಯಕೀಯ ಮಾಫಿಯಾ ಬಲವಾಗಿ ಕೆಲಸ ಮಾಡುತ್ತಿದೆ ಎಂದು ಸಾಮಾನ್ಯ ಜನ ಮಾತನಾಡಿಕೊಳ್ಳುತ್ತಿದ್ದಾರೆ.

" ವೈದ್ಯರು ಈಗಲೂ ಸಂಪೂರ್ಣ ನಂಬಿಕೆಗೆ ಅರ್ಹರು ಆದರೆ ಆಸ್ಪತ್ರೆಗಳಲ್ಲ " ಎಂದು ಹಿರಿಯ ಚಿಂತಕರೊಬ್ಬರು ಅಭಿಪ್ರಾಯ ಪಡುತ್ತಾರೆ. ಅಂದರೆ ವೈದ್ಯರನ್ನು ಮೀರಿದ ಒಂದು ದಂಧೆ ತುಂಬಾ ಸಕ್ರೀಯವಾಗಿದೆ ಎಂದು ಭಾಸವಾಗುತ್ತಿದೆ.

ವಿಷಯುಕ್ತ ನೀರು ಗಾಳಿ ಆಹಾರ, ಅತಿ ಕಡಿಮೆ ದೇಹ ದಂಡನೆ, ವಿಪರೀತ ಮಾನಸಿಕ ಒತ್ತಡ, ಅತಿಯಾದ ದುರಾಸೆಗಳು ಮುಂತಾದ ಹಲವಾರು ಕಾರಣಗಳಿಂದ ಅನಿರೀಕ್ಷಿತ ಸಾವುಗಳು ಹೆಚ್ಚಾಗುತ್ತಿವೆ. ಸಂಪರ್ಕ ಕ್ರಾಂತಿಯ ಫಲವಾಗಿ ಅನೇಕ ಆರೋಗ್ಯದ ಸಲಹೆಗಳು ನಿಜ ಸುಳ್ಳುಗಳ ಭೇದವಿಲ್ಲದೆ ಸಾಮಾಜಿಕ ಜಾಲತಾಣಗಳಲ್ಲಿ ಹರಡಿ ಜನರಲ್ಲಿ ಜಾಗೃತಿಗಿಂತ ಹೆಚ್ಚಾಗಿ ಭಯ ಉಂಟಾಗಿ ಆಸ್ಪತ್ರೆಗಳ ಮೇಲೆ ಅವಲಂಬನೆ ಜಾಸ್ತಿಯಾಗಿದೆ.

ಅದರ ಪರಿಣಾಮ ಆಸ್ಪತ್ರೆಗಳಿಗೆ ಬೇಡಿಕೆ ಹೆಚ್ಚಾಗಿ ಬಹುತೇಕ ಆಸ್ಪತ್ರೆಗಳಿಗೆ ಪೂರ್ವಾನುಮತಿ ಪಡೆದೇ ಹೋಗಬೇಕಿದೆ. ಅದರ ನಂತರವೂ ಉದ್ದದ ಸರತಿ ಸಾಲಿನಲ್ಲಿ ನಿಲ್ಲಬೇಕಿದೆ. ಇದು ಕಾರ್ಪೊರೇಟ್ ಜನರಿಗೆ ವ್ಯಾಪಾರದ ಬಾಗಿಲು ತೆರೆಯುವಂತಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಇದ್ದ ಸಣ್ಣ ಸಣ್ಣ ಕ್ಲಿನಿಕ್ ಗಳು ಇಂದು ಕಡಿಮೆಯಾಗಿ ಎಲ್ಲಾ ಕಡೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳು 5 ಸ್ಟಾರ್ ಹೋಟೆಲುಗಳಂತೆ ತಲೆ ಎತ್ತಿವೆ. ಇದರ ಪರಿಣಾಮ ಅಂದು ವೈದ್ಯರಲ್ಲಿದ್ದ ಸೇವಾ ಮನೋಭಾವ ಕಡಿಮೆಯಾಗಿ ಅವರು ಸಹ ಕಾರ್ಪೊರೇಟ್ ಧಣಿಗಳ ಕೈಗೊಂಬೆಗಳಾಗಿ ಟಾರ್ಗೆಟ್ ಅಡಿಯಲ್ಲಿ ಕೆಲಸ ಮಾಡಬೇಕಾಗಿದೆ. ವೈದ್ಯರನ್ನು ಕಾರ್ಪೊರೇಟ್ ದಗಾಕೋರರ ಮಡಿಲಿಗೆ ಹಿಡಿತಕ್ಕೆ ದೂಡದಿರೋಣವೋ., ಈ ರೀತಿಯ ಒಂದು ಕಮೀಷನ್ ದಂಧೆಯೂ ನಡೆಯುತ್ತಿದೆ. ಆತನಿಗೆ ಕೆಲವು ವೈದ್ಯಕೀಯ ಆಂಬುಲೆನ್ಸ್ ಚಾಲಕರ ನಿರಂತರ ಸಂಪರ್ಕವಿದೆ. ಯಾವುದೇ ರೀತಿಯ ಅಪಘಾತ ಅಥವಾ ಅನಾರೋಗ್ಯದ ಕರೆ ಆಂಬುಲೆನ್ಸ್ ಚಾಲಕರಿಗೆ ಬಂದಾಗ ಅವರು ಆ ರೋಗಿಯ ಬಳಿಗೆ ಹೋಗುವ ಮೊದಲು ಇವನಿಗೆ ಕಾಲ್ ಮಾಡುತ್ತಾರೆ.

ಈತನಿಗೆ ಸುತ್ತಮುತ್ತಲ ಕೆಲವು ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಮ್ ಗಳ ಕಾಂಟ್ಯಾಕ್ಟ್ ಇದೆ. ಈತ ಆ ಚಾಲಕರಿಗೆ ಯಾವ ಆಸ್ಪತ್ರೆಗೆ ರೋಗಿಯನ್ನು ಕರೆತರಬೇಕು ಎಂದು ಸೂಚಿಸುತ್ತಾನೆ. (ರೋಗಿ ಅಥವಾ ಆತನ ಕಡೆಯವರು ಮೊದಲೇ ಇಂತಹ ಆಸ್ಪತ್ರೆಗೆ ಎಂದು ನಿರ್ಧರಿಸಿದ್ದರೆ ಆಗ ಇದು ಸಾಧ್ಯವಿಲ್ಲ.) ಚಾಲಕ ಆ ಆಸ್ಪತ್ರೆಗೆ ರೋಗಿಯನ್ನು ದಾಖಲಿಸಿದರೆ ಸಾಕು. ಆ ಆಸ್ಪತ್ರೆಯವರು ಈ ಏಜೆಂಟ್ ಗೆ ಒಂದಷ್ಟು ಕಮೀಷನ್ ಕೊಡುತ್ತಾರೆ. ಅದರಲ್ಲಿ ಸ್ವಲ್ಪ ಭಾಗವನ್ನು ಈತ ಆಂಬುಲೆನ್ಸ್ ಚಾಲಕರಿಗೆ ಕೊಡುತ್ತಾನೆ. ಪ್ರತಿನಿತ್ಯ ಐದಾರು ಈ ರೀತಿಯ ಕೇಸುಗಳು ಸಿಗುತ್ತವೆ.

ಮುಖ್ಯವಾಗಿ ಅಪಘಾತಗಳ ಸಂದರ್ಭದಲ್ಲಿ ಈತನ ಕಮೀಷನ್ ವ್ಯಾಪಾರ ಜೋರಾಗಿರುತ್ತದಂತೆ, ಅಪಘಾತದ ತೀವ್ರತೆ ಆಧರಿಸಿ ಅಥವಾ ಆ ಕ್ಷಣದ ವೈದ್ಯಕೀಯ ಅವಶ್ಯಕತೆಯ ಚಿಕಿತ್ಸೆಗಿಂತ ಈತ ಹೆಚ್ಚು ಕಮೀಷನ್ ಕೊಡುವ ಆಸ್ಪತ್ರೆಗೆ ರೋಗಿಯನ್ನು ಸೇರಿಸುತ್ತಾನೆ. ಆ ಆಸ್ಪತ್ರೆಯ ಸುಲಿಗೆ ಈತನ ಕಮೀಷನ್ ಹಣದಿಂದ ಪ್ರಾರಂಭವಾಗುತ್ತದೆ. ಅವಶ್ಯಕತೆ ಇರಲಿ ಬಿಡಲಿ ಅವರು ಕಡ್ಡಾಯವಾಗಿ ದಾಖಲು ಮಾಡಿಕೊಂಡು ಚಿಕಿತ್ಸೆ ಮತ್ತು ದೊಡ್ಡ ಮೊತ್ತದ ಹಣ ಕೀಳುತ್ತಾರೆ.

ಎಲ್ಲಿಗೆ ಬಂದಿದೆ ನೋಡಿ ನಮ್ಮ ವ್ಯವಸ್ಥೆ. ಈ ರೀತಿಯ ಕೆಲವರು ಇದೇ ವೃತ್ತಿ ಮಾಡುತ್ತಿದ್ದಾರೆ ಎಂದು ಅನಂತರ ತಿಳಿಯಿತು.

ನಮ್ಮ ದೇಶದಲ್ಲಿ ಬದುಕಲು ಅನೇಕ ವೃತ್ತಿಗಳಿವೆ ನಿಜ. ಸಾವಿನ, ನೋವಿನ, ಅಸಹಾಯಕತೆಯ, ಅನಿವಾರ್ಯತೆಯ ಮತ್ತು ಅಜ್ಞಾನದ ಸಂದರ್ಭವನ್ನು ದುರುಪಯೋಗಪಡಿಸಿಕೊಂಡು ಹಣ ಮಾಡುವುದನ್ನು ಒಂದು ವೃತ್ತಿಯಾಗಿ ಸ್ವೀಕರಿಸುವುದು ಅತ್ಯಂತ ಅಮಾನವೀಯ ಎಂದೇ ಹೇಳಬೇಕಾಗುತ್ತದೆ. ಭವಿಷ್ಯದಲ್ಲಿ ಇದು ಸಮಾಜಕ್ಕೆ ಮಾರಕವಾಗುತ್ತದೆ.

ಇನ್ನು ವೈದ್ಯಕೀಯ ಕ್ಷೇತ್ರವೂ ಸಹ ಲಾಡ್ಜ್ ಗಳು, ಹೋಟೆಲ್ ಗಳು, ಶಾಲೆಗಳ ರೀತಿ ಗಿರಾಕಿಗಳನ್ನು ಕರೆ ತಂದವರಿಗೆ ಕಮೀಷನ್ ನೀಡುವ, ಆ ಮುಖಾಂತರ ತಮ್ಮ ವ್ಯಾಪಾರ ವ್ಯವಹಾರ ಅಭಿವೃದ್ಧಿ ಪಡಿಸಿಕೊಳ್ಳುವ ವಿಧಾನ ತುಂಬಾ ಹೇಯವಾದದ್ದು. ಇದು ಜನರ ವಿಶ್ವಾಸವನ್ನು ಬಹುಬೇಗ ಕಳೆದುಕೊಳ್ಳುತ್ತದೆ.

ಆಸ್ಪತ್ರೆಗಳ ಸುಲಿಗೆ ಕೊರೋನಾ ಸಂದರ್ಭದಲ್ಲಿ ಮಾತ್ರ ಪ್ರಾರಂಭವಾಗಿಲ್ಲ. ಅದು ಹಿಂದಿನಿಂದಲೂ ಇದೆ. ಕಾರ್ಪೊರೇಟ್ ಸಂಸ್ಥೆಗಳು ಜನರ ಅನಾರೋಗ್ಯ ಅಪಘಾತಗಳನ್ನು ಹಣ ಮಾಡುವ ದಂಧೆಯಾಗಿ ಮಾಡಿಕೊಂಡು ರೋಗಿಗಳೇ ಗ್ರಾಹಕರಾಗುವ ಸಂಸ್ಕೃತಿಯನ್ನು ಹುಟ್ಟುಹಾಕಿದ್ದಾರೆ.

ಜೊತೆಗೆ ಸರ್ಕಾರಗಳು ಸಹ ವೈದ್ಯಕೀಯ ಶಿಕ್ಷಣವನ್ನು ಅತ್ಯಂತ ದುಬಾರಿ ವೆಚ್ಚದ ಪದವಿಯನ್ನಾಗಿ ಮಾಡಿ ಆಸ್ಪತ್ರೆಗಳಿಗೂ ಕಮರ್ಷಿಯಲ್ ಟ್ಯಾಕ್ಸ್, ವಿದ್ಯುತ್, ನೀರು, ಬಾಡಿಗೆ ಎಲ್ಲವನ್ನೂ ವಿಧಿಸಿರುವಾಗ ಅವರೂ ಸಹ ಅದಕ್ಕೆ ತಕ್ಕಂತೆ ಹಣವನ್ನೇ ಗುರಿ ಮಾಡಿಕೊಂಡು ರೋಗವೇ ಒಂದು ವ್ಯಾಪಾರ ಆಗಿ ಬದಲಾಗಿದೆ. ಒಂದು ಸಣ್ಣ ಅಂಶವನ್ನು ಜನರು ಮತ್ತು ಸರ್ಕಾರ ಗುರುತಿಸದೇ ಮರೆತಂತಿದೆ. ಆಸ್ಪತ್ರೆಗಳು ಸರಳವಾಗಿ, ಸ್ವಚ್ಚವಾಗಿ, ಉತ್ತಮ ವೈದ್ಯಕೀಯ ಯಂತ್ರಗಳು ಮತ್ತು ಸಿಬ್ಬಂದಿಯನ್ನು ಹೊಂದಿದ್ದರೆ ಸಾಕು.

ಆದರೆ ಅದು ಏನು ಹುಚ್ಚು ಹಿಡಿದಿದೆಯೋ ಅರ್ಥವಾಗುತ್ತಿಲ್ಲ. ಆಸ್ಪತ್ರೆಯ ಕಟ್ಟಡಗಳನ್ನೇ ಫೈವ್ ಸ್ಟಾರ್ ಹೋಟೆಲಿನಂತೆ ಭವ್ಯವಾಗಿ ನಿರ್ಮಿಸಿ, ಅತ್ಯಂತ ದುಬಾರಿ ವೆಚ್ಚದ ನಿರ್ಮಾಣ ಸಾಮಗ್ರಿಗಳನ್ನು ಉಪಯೋಗಿಸಿ, ಅನಾವಶ್ಯಕ ಸಿಬ್ಬಂದಿಯನ್ನು ನೇಮಿಸಿಕೊಂಡು ಆ ಎಲ್ಲಾ ವೆಚ್ಚವನ್ನು ರೋಗಿಗಳ ಮೇಲೆ ಹೇರಲಾಗುತ್ತದೆ. ಆಸ್ಪತ್ರೆಗಳ ಪ್ರಾರಂಭಿಕ ಚಿಕಿತ್ಸೆಯೇ ಸಾವಿರಾರು ರೂಪಾಯಿಗಳಿಂದ ಪ್ರಾರಂಭವಾಗುತ್ತದೆ.

ಆಸ್ಪತ್ರೆಗಳಿಗೆ ಮನುಷ್ಯ ಮಜಾ ಮಾಡಲು ಹೋಗುತ್ತಾನೆಯೇ ? ಆ ರೀತಿಯ ಭವ್ಯ ಕಟ್ಟಡದ ಅವಶ್ಯಕತೆ ಏನಿದೆ ? ಸೌಕರ್ಯ ಮತ್ತು ಸೇವೆ ಮಾತ್ರ ಮುಖ್ಯವಾಗಬೇಕಲ್ಲವೇ..? ಅದರಿಂದಾಗಿಯೇ ಇಂದು ನಾವು ಆಸ್ಪತ್ರೆಗಳ ರಾಕ್ಷಸೀ ವರ್ತನೆಯನ್ನು ನೋಡುತ್ತಿದ್ದೇವೆ.

ಇನ್ನೂ ಜೀವ ವಿಮೆ ಎಂಬ ಬೃಹತ್ ಮಾಯಾಜಾಲವೂ ಜೀವ ರಕ್ಷಣೆಯನ್ನೂ ಆರ್ಥಿಕ ಸುರಕ್ಷತೆಯನ್ನೂ ಮೀರಿ ಹೊಸ ದಂಧೆಯಾಗಿ ಮಾರ್ಪಾಡಾಗಿದೆ.

ಅದನ್ನು ಮುಂದೊಮ್ಮೆ ಚರ್ಚಿಸೋಣ. ಬದುಕು ಅನಿವಾರ್ಯ ನಿಜ. ಆದರೆ ಬದುಕಲು ಇಷ್ಟೊಂದು ಕೆಳ ಹಂತಕ್ಕೆ ನಾವು ಇಳಿಯಬೇಕೆ ? ನಾಗರಿಕ ಸಮಾಜ ಚಲಿಸುತ್ತಿರುವುದು, ತಪ್ಪುಗಳನ್ನು ಸರಿಪಡಿಸಿಕೊಂಡು ಮುಂದಕ್ಕೆ ಸಾಗುವ ಮಾರ್ಗಗಳನ್ನು ಹುಡುಕೋಣ. ವೈದ್ಯಕೀಯ ನಮ್ಮ ಬದುಕಿನ ಅವಿಭಾಜ್ಯ ಅಂಗ. ವೈದ್ಯರು ನಮ್ಮ ಜೀವರಕ್ಷಕರು. ಕೊರೋನಾ ನಂತರದ ವಾತಾವರಣ ವೈದ್ಯಕೀಯ ಕ್ಷೇತ್ರದ ಹೊಸ ಪರಿಕಲ್ಪನೆಗೆ ನಾಂದಿಯಾಗಲಿ ಎಂದು ಆಶಿಸುತ್ತಾ..!



**ನವೀನ ಹೆಚ್.ಎ ಹನುಮನಹಳ್ಳಿ, ಕೆ.ಆರ್ ನಗರ.**

# ದೇಹ ಎಂಬ ದೇಗುಲಕ್ಕೆ ಸಂಸ್ಕಾರಗಳನ್ನು ನೀಡಬೇಕು: ನಾಡೋಜ ಅನ್ನದಾನೇಶ್ವರ ಮಹಾ ಶಿವಯೋಗಿಗಳು

## ಅತ್ಯಂತ ವಿಜೃಂಭಣೆಯಿಂದ ಸಂಪನ್ನಗೊಂಡ ಶ್ರೀ ಜಗದ್ಗುರು ಅನ್ನದಾನೇಶ್ವರ ಪಂಚಕಳಸ ಮಹಾ ರಥೋತ್ಸವ

ಅ.ಶ. ಸುದ್ದಿ ಕುಕನೂರು

**ಕುಕನೂರು: ಮಾನವ ದೇಹವು ದೇವರು ನೀಡಿದ ಪವಿತ್ರ ದೇಗುಲದಂತಿದ್ದು, ಅದಕ್ಕೆ ಉತ್ತಮ ಸಂಸ್ಕಾರ, ಸತ್ಸಂಗ ಮತ್ತು ಸನ್ಮಾರ್ಗದ ಚಿಂತನೆಗಳನ್ನು ನೀಡುವ ಮೂಲಕ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕು ಎಂದು ಮುಂಡರಗಿಯ ನಾಡೋಜ ಶ್ರೀ ಅನ್ನದಾನೇಶ್ವರ ಮಹಾ ಶಿವಯೋಗಿಗಳು ಹೇಳಿದರು. ಕುಕನೂರು ಪಟ್ಟಣದ ಶ್ರೀ ಜಗದ್ಗುರು ಅನ್ನದಾನೇಶ್ವರ ಮಹಾ ಶಿವಯೋಗಿಗಳವರ ಅಪ್ಪಣೆಯ ಮೇರೆಗೆ ಬುಧವಾರ ನಡೆದ ಶ್ರೀ ಜಗದ್ಗುರು ಅನ್ನದಾನೇಶ್ವರ ಪಂಚಕಳಸ ಮಹಾ ರಥೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.**

ಸಂಸ್ಕಾರಯುತ ಜೀವನದಿಂದ ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣವಾಗುತ್ತದೆ. ಧರ್ಮ, ಸಂಸ್ಕೃತಿ ಹಾಗೂ ಮಾನವೀಯ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ದೇಹವನ್ನು ಕೇವಲ ಬಾಹ್ಯವಾಗಿ ಅಲಂಕರಿಸುವುದಕ್ಕಿಂತಲೂ ಮನಸ್ಸನ್ನು ಉತ್ತಮ ಸಂಸ್ಕಾರಗಳಿಂದ ಅಲಂಕರಿಸಿಕೊಳ್ಳುವುದು ಅತ್ಯಂತ



ಮುಖ್ಯವಾಗಿದೆ ಎಂದು ಅವರು ತಿಳಿಸಿದರು. ಕಾರ್ಯಕ್ರಮದ ಅಂಗವಾಗಿ ಬೆಳಗ್ಗಿನಿಂದಲೇ ಶ್ರೀ ಅನ್ನದಾನೇಶ್ವರ ಶಿವಯೋಗಿಗಳ ಗದ್ದಿಗೆಯಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳು ಭಕ್ತಿಪೂರ್ವಕವಾಗಿ ನೆರವೇರಿದವು. ನಂತರ ಮಧ್ಯಾಹ್ನ 12.30 ಗಂಟೆಗೆ 13 ಜೋಡಿಗಳ ಸಾಮೂಹಿಕ ವಿವಾಹ ಕಾರ್ಯಕ್ರಮ ಧಾರ್ಮಿಕ ವಿಧಿವಿಧಾನಗಳೊಂದಿಗೆ ನೆರವೇರಿಸಲಾಯಿತು. ಸಾಮೂಹಿಕ ವಿವಾಹದಲ್ಲಿ ನವಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಡುತ್ತಿದ್ದಂತೆ ನೆರೆದಿದ್ದ ಭಕ್ತರು ಹಾಗೂ ಕುಟುಂಬಸ್ಥರು ಶುಭ ಹಾರೈಸಿದರು. ಶ್ರೀಮಠದ ವತಿಯಿಂದ ವಿವಾಹಕ್ಕೆ ಆಗಮಿಸಿದ ಕುಟುಂಬಸ್ಥರು, ಭಕ್ತಾದಿಗಳು ಹಾಗೂ ಸಾರ್ವಜನಿಕರಿಗೆ



ಅನ್ನಸಂತರ್ಪಣೆಯ ವ್ಯವಸ್ಥೆ ಮಾಡಲಾಗಿತ್ತು. ನಂತರ ಸಂಜೆ 5 ಗಂಟೆಗೆ ಹರ-ಗುರು-ಚರಮೂರ್ತಿಗಳ ದಿವ್ಯ ಸಾನ್ನಿಧ್ಯದಲ್ಲಿ ಅತ್ಯಂತ ವಿಜೃಂಭಣೆಯಿಂದ ಮಹಾ ರಥೋತ್ಸವ ನಡೆಯಿತು. ಬಾಜಾ-ಭಜಂತ್ರಿಗಳ ನಾದ, ಭಕ್ತರ ಜಯಘೋಷ ಹಾಗೂ ಧಾರ್ಮಿಕ ವಾತಾವರಣದ ನಡುವೆ ಶ್ರೀ ಜಗದ್ಗುರು ಅನ್ನದಾನೇಶ್ವರರ ರಥೋತ್ಸವವು ಅದ್ಧೂರಿಯಾಗಿ ಸಾಗಿತು.

ನಾಡೋಜ ಅನ್ನದಾನೇಶ್ವರ ಮಹಾ ಶಿವಯೋಗಿಗಳವರು ರಥೋತ್ಸವಕ್ಕೆ ಚಾಲನೆ ನೀಡಿದರು. ಸಾವಿರಾರು ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಭಕ್ತಿ ಭಾವದಿಂದ ಶ್ರೀಗಳ ದರ್ಶನ ಪಡೆದು ಪುನೀತರಾದರು. ಕುಕನೂರು ಪಟ್ಟಣದ ಪ್ರಮುಖ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಒಂದಾದ ಈ ಪಂಚಕಳಸ ಮಹಾ ರಥೋತ್ಸವವು ಭಕ್ತಿ, ಸಂಸ್ಕೃತಿ ಮತ್ತು ಸಂಸ್ಕಾರಗಳ ಸಂಗಮವಾಗಿ ಜನಮನ ಸೆಳೆಯಿತು. ನಾಡೋಜ ಅನ್ನದಾನೇಶ್ವರ ಮಹಾ ಶಿವಯೋಗಿಗಳು, ಅಭಿನವ ಪಂಚಾಕ್ಷರಿ ಶಿವಾಚಾರ್ಯ ಮಹಾಸ್ವಾಮಿಗಳು ರಾಜೂರ, ಶಿವಲಿಂಗ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು ಹಂಪಸಾಗರ, ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಮಂಗಳೂರು, ಬಸವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಯಲಬುರ್ಗಾ, ವೀರ ಸಂಗಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಚಳಗೇರಿ, ಸಿದ್ದೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಮೈನಳ್ಳಿ, ಇವರು ದಿವ್ಯ ಸಾನಿಧ್ಯವನ್ನು ವಹಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ಅನ್ನದಾನೇಶ್ವರ ಶಾಖ ಮಠದ ಆಡಳಿತ ಮಂಡಳಿಯವರು ರೈತಪರ ಸಂಘಟನೆಯವರು ಪೊಲೀಸ್ ಇಲಾಖೆಯವರು, ವಿವಿಧ ಭಜನಾ ಮಂಡಳಿಯವರು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಶ್ರೀ ಅನ್ನದಾನೇಶ್ವರ ಮಠದ ಭಕ್ತಾದಿಗಳು ಇತರರು ಇದ್ದರು.

## ಅಪಘಾತದ ಗಾಯಾಳುಗಳಿಗೆ ಬಾಬುಗೌಡ ಬಾದರ್ಲಿ ಸಾಂತ್ವನ

ಅ.ಶ. ಸುದ್ದಿ ಸಿಂಧನೂರು

**ಸಿಂಧನೂರು: ಸಿಂಧನೂರು ವಿಧಾನಸಭಾ ಕ್ಷೇತ್ರದ ಅಲಬನೂರು ಹಾಗೂ ಬಾದರ್ಲಿ ಗ್ರಾಮಗಳ ಮಧ್ಯೆ ಲೇಬರ್ ಖುಷಿಯರ್ ವಾಹನಕ್ಕೆ ಮತ್ತೊಂದು ವಾಹನ ಡಿಕ್ಕಿ ಹೊಡೆದ ಪರಿಣಾಮ ಕೆಲವರು ಗಾಯಗೊಂಡ ಘಟನೆ ನಡೆದಿದೆ. ಅಪಘಾತದಲ್ಲಿ ಗಾಯಗೊಂಡವರನ್ನು ತಕ್ಷಣವೇ ಸಿಂಧನೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸದೆ, ಗಾಯಾಳುಗಳು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.**



ಘಟನೆ ತಿಳಿಯುತ್ತಿದ್ದಂತೆ ಸಿಂಧನೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುಗೌಡ ಬಾದರ್ಲಿ ಅವರು ಆಸ್ಪತ್ರೆಗೆ ಧಾವಿಸಿ ಗಾಯಾಳುಗಳನ್ನು ಭೇಟಿ ಮಾಡಿದರು. ಗಾಯಾಳುಗಳೊಂದಿಗೆ ಆತ್ಮೀಯವಾಗಿ ಮಾತನಾಡಿ ಅವರ ಆರೋಗ್ಯದ ಬಗ್ಗೆ ವಿಚಾರಿಸಿದ ಅವರು, ಕುಟುಂಬಸ್ಥರಿಗೆ ಧೈರ್ಯ ತುಂಬಿದರು. ಬಳಿಕ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿಯಿಂದ ಗಾಯಾಳುಗಳ ಆರೋಗ್ಯ ಸ್ಥಿತಿ ಮತ್ತು ನೀಡಲಾಗುತ್ತಿರುವ ಚಿಕಿತ್ಸೆಯ ಕುರಿತು ಮಾಹಿತಿ ಪಡೆದುಕೊಂಡರು. ಅಗತ್ಯವಿರುವ ಎಲ್ಲಾ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವಂತೆ ವೈದ್ಯರಿಗೆ ತಿಳಿಸಿದರು. "ಅಪಘಾತದಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸದಿರುವುದು ಸಮಾಧಾನದ ಸಂಗತಿ. ಗಾಯಾಳುಗಳು ಶೀಘ್ರ ಗುಣಮುಖರಾಗಲಿ. ಅವರ ಚಿಕಿತ್ಸೆಗೆ ಅಗತ್ಯವಿರುವ ಎಲ್ಲ ಸಹಕಾರ ನೀಡಲಾಗುವುದು" ಎಂದು ಬಾಬುಗೌಡ ಬಾದರ್ಲಿ ಅವರು ತಿಳಿಸಿದರು. ಶ್ರೀ ಒಳಬಳ್ಳಾರಿ ಚೆನ್ನಬಸವೇಶ್ವರ ತಾತನವರ ಆಶೀರ್ವಾದದಿಂದ ದೊಡ್ಡ ಅನಾಹುತ ತಪ್ಪಿದ್ದು, ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ಸ್ಥಳೀಯರು ಪ್ರಾರ್ಥಿಸಿದ್ದಾರೆ. ಈ ಸಂದರ್ಭದಲ್ಲಿ ಆನಂದ್ ಪಟೇಲ್, ರಾಮನಗೌಡ ಸಾಸಲಮರಿ, ಎನ್.ಎಸ್. ಅಂಬರೀಶ್ ಸೇರಿದಂತೆ ಮುಖಂಡರು, ಕಾರ್ಯಕರ್ತರು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಜಿಲ್ಲೆ ಬರಗಾಲ ಘೋಷಣೆಗೆ ಆಗ್ರಹಿಸಿ 8ನೇ ದಿನವೂ ಹೋರಾಟ.

ಅ.ಶ. ಸುದ್ದಿ ವಿಜಯಪುರ

**ವಿಜಯಪುರ: ಜಿಲ್ಲೆಯನ್ನು ಸಂಪೂರ್ಣ ಬರಗಾಲ ಪೀಡಿತ ಜಿಲ್ಲೆ ಎಂದು ಘೋಷಿಸುವಂತೆ ಆಗ್ರಹಿಸಿ ನಡೆಯುತ್ತಿರುವ ಹೋರಾಟ 8ನೇ ದಿನಕ್ಕೆ ಕಾಲಿಟ್ಟಿದೆ. ಹೋರಾಟಕ್ಕೆ ಹಿರಿಯ ರೈತ ಹೋರಾಟಗಾರ ಹಾಗೂ ರೈತ ಸಂಘದ ಜಿಲ್ಲಾಧ್ಯಕ್ಷ ಚಂದ್ರಗೌಡ ಪಾಟೀಲ ಸಂಪೂರ್ಣ ಬೆಂಬಲ ಸೂಚಿಸಿದರು.**

ಈ ವೇಳೆ ಮಾತನಾಡಿದ ಅವರು, ಜಿಲ್ಲೆಯಲ್ಲಿ ರೈತರ ನಡುವೆ ಯಾವುದೇ ಬೇಧಭಾವ ಮಾಡದೆ, ಎಲ್ಲ ತಾಲೂಕುಗಳನ್ನೂ ಪರಿಗಣನೆಗೆ ತೆಗೆದುಕೊಂಡು ಬರಗಾಲ ಘೋಷಿಸಬೇಕು ಎಂದು ಆಗ್ರಹಿಸಿದರು. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಚುನಾವಣೆಯ ಸಂದರ್ಭದಲ್ಲಿ ರೈತರ ಹೆಸರಿನಲ್ಲಿ ಪ್ರಮಾಣ ಮಾಡಿ ಅಧಿಕಾರಕ್ಕೆ ಬಂದ




ಬಳಿಕ ರೈತರ ಸಮಸ್ಯೆಗಳನ್ನು ಮರೆಯುತ್ತಿವೆ. ಮಳೆ ಕೊರತೆಯಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದು, ಬೆಳೆಗಾಗಿ ಮಾಡಿದ ಖರ್ಚು ಕೂಡ ವಾಪಸ್ ಬರದೆ ಸಾಲದ ಹೊರೆ ಹೆಚ್ಚಾಗಿದೆ.

ಅನೇಕ ರೈತರು ಜೀವನೋಪಾಯಕ್ಕಾಗಿ ಊರು ತೊರೆದು ಗುಳೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು. ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಮಹಾದೇವ ಬನಸೋಡೆ ಮಾತನಾಡಿ, ಜಿಲ್ಲೆಯಲ್ಲಿ ಎಲ್ಲರಿಗೂ ಸಮಾನ ಸಾಮಾಜಿಕ ನ್ಯಾಯ ಸಿಗುತ್ತಿಲ್ಲ. ಕೆಲವು ಮತಕ್ಷೇತ್ರಗಳಲ್ಲಿ ನೀರಿನ ಸೌಲಭ್ಯವಿದ್ದರೂ ಬರಗಾಲ ಘೋಷಣೆ ಮಾಡಿಸಿಕೊಳ್ಳಲಾಗುತ್ತಿದೆ. ಆದರೆ ಸಂಪೂರ್ಣವಾಗಿ ಮಳೆ ಆಶ್ರಿತವಾಗಿರುವ ತಾಲೂಕುಗಳಲ್ಲಿ ಮಳೆ ಕೊರತೆಯಿದ್ದರೂ ಬರಗಾಲ ಘೋಷಿಸುತ್ತಿಲ್ಲ.

ಈ ತಾರತಮ್ಯ ಸರಿಪಡಿಸಿ ವಿಜಯಪುರ ಜಿಲ್ಲೆಯ 13 ತಾಲೂಕುಗಳನ್ನೂ ಬರಗಾಲ ಪೀಡಿತ ಎಂದು ಘೋಷಿಸಬೇಕು ಎಂದು ಒತ್ತಾಯಿಸಿದರು. ಹೋರಾಟದಲ್ಲಿ ಜಿಲ್ಲಾಧ್ಯಕ್ಷ ಸಂಗಮೇಶ ಸಗರ, ದೇವರಹಿಪ್ಪರಗಿ ಅಧ್ಯಕ್ಷ ಈರಪ್ಪ ಕುಲೇಕುಮಟಗಿ, ಶಿವಾನಂದಯ್ಯ ಹಿರೇಮಠ, ರಾಮನಗೌಡ ಪಾಟೀಲ, ಅನಮೇಶ ಜಮಖಂಡಿ, ಬಸಗೊಂಡ ತೇಲಿ, ಅಮರೇಶ ಭೈರಗೊಂಡ, ಮುರಗೇಂದ್ರ ಸಿಂಪಿ, ಹಣಮಂತ ಬಿಜಾಪುರ, ಜಟ್ಟೆಪ್ಪ ಬಿರಾದಾರ, ದುಸಂಗೇಪ್ಪ ಬಿರಾದಾರ, ಲಕ್ಕಪ್ಪ ಬಿರಾದಾರ, ರವಿ ರಾಠೋಡ, ಭೀಮಣ್ಣ ಬಿರಾದಾರ, ಸಂತೋಷ ಬಂಗಾರಿ, ಪ್ರಕಾಶ ದೊಡಮನಿ, ಸಿದ್ದು ಜೇವರಗಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಸುರಕ್ಷತಾ ಕಿಟ್‌ಗಳನ್ನು ಪಡೆದು ಸದುಪಯೋಗಪಡಿಸಿಕೊಳ್ಳಿ: ರವಿಚಂದ್ರ ಕರೆ



ಅ.ಶ. ಸುದ್ದಿ ಕುಕನೂರು

**ಕುಕನೂರು: ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿ ಬೆಂಗಳೂರು ರವರ ವತಿಯಿಂದ ಕಟ್ಟಡ ಮತ್ತು ಇತರೆ ನಿರ್ಮಾಣದಲ್ಲಿ ಸೇರಿದಂತೆ ವಿವಿಧ ವೃತ್ತಿಗಳಲ್ಲಿ ತೊಡಗಿರುವ ಕಾರ್ಮಿಕರು ಕೆಲಸದ ಸಮಯದಲ್ಲಿ ತಮ್ಮ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕಾರ್ಮಿಕ ಇಲಾಖೆಯ ಕೊಪ್ಪಳ ಸೇವಾ ಕೇಂದ್ರದ ರವಿಚಂದ್ರ ಕರೆ ನೀಡಿದರು.**

ಕುಕನೂರು ಪಟ್ಟಣದ ಕಾರ್ಮಿಕ ಇಲಾಖೆಯ ಕುಷ್ಟಗಿ ವೃತ್ತ ಕಾರ್ಮಿಕ ನಿರೀಕ್ಷಕರ ಕಚೇರಿಯ ವತಿಯಿಂದ ಕಟ್ಟಡ ಕಾರ್ಮಿಕರು ಹಾಗೂ ಮೇಷನ್, ಪೇಂಟರ್ ಮತ್ತು ವೆಲ್ಡಿಂಗ್, ಕಾರ್ಪೆಂಟರ್, ಎಲೆಕ್ಟ್ರಿಷಿಯನ್, ಕೆಲಸ ನಿರ್ವಹಿಸುವ ಕಾರ್ಮಿಕರಿಗೆ ಕೆಲಸದ ವೇಳೆ ಸುರಕ್ಷತೆಗಾಗಿ ವಿವಿಧ ಅಗತ್ಯ ಸುರಕ್ಷತಾ ಸಾಮಗ್ರಿಗಳನ್ನು ಒಳಗೊಂಡ ಕಿಟ್‌ಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಸುರಕ್ಷತಾ ಕಿಟ್‌ಗಳನ್ನು ವಿತರಿಸಿ ಮಾತನಾಡಿದ ರವಿಚಂದ್ರ ಅವರು, ಕಾರ್ಮಿಕರು ತಮ್ಮ ಜೀವ ಮತ್ತು ಆರೋಗ್ಯದ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಕೆಲಸದ ಸಂದರ್ಭದಲ್ಲಿ ಅಗತ್ಯ ಸುರಕ್ಷತಾ ಸಾಮಗ್ರಿಗಳನ್ನು ಕಡ್ಡಾಯವಾಗಿ ಬಳಸಬೇಕು. ಸರ್ಕಾರದಿಂದ ಕಾರ್ಮಿಕರ ಹಿತದೃಷ್ಟಿಯಿಂದ ನೀಡಲಾಗುತ್ತಿರುವ ಸುರಕ್ಷತಾ ಸಾಮಗ್ರಿಗಳನ್ನು ಪಡೆದುಕೊಂಡು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕಾರ್ಮಿಕ ಇಲಾಖೆಯ ಕುಕನೂರು ಪಟ್ಟಣದ ವೀರಯ್ಯ ಹಾಗೂ ಕಾರ್ಮಿಕರಾದ ದಾವಲಸಾಬ್, ಕಾಶಿಂಸಾಬ್ ಬೆದವಟ್ಟಿ, ಪ್ರಕಾಶ್ ಕಲಾಲ್, ಕರೀಂಸಾಬ್ ಚಾಂದಬಾವಿ, ದಸ್ತಗಿರಿಸಾಬ್ ಬೆದವಟ್ಟಿ, ಶಫಿಸಾಬ್ ರೇವಣಕಿ, ಸಿದ್ದಪ್ಪ ಬಾಬುಸಾಬ್ ಬನ್ನಿಕಟ್ಟಿ, ಮೆಹಬೂಬ್ ಪಾಷಾ, ಶಬ್ಬೀರ್ ಸೇರಿದಂತೆ ವಿವಿಧ ಕಾರ್ಮಿಕರು ಉಪಸ್ಥಿತರಿದ್ದರು.

# ಅದ್ದೂರಿಯಾಗಿ ಜರುಗಿದ ಅಳಿಯ ಚನ್ನಬಸವೇಶ್ವರ ರಥೋತ್ಸವ

ಅ.ಶ. ಸುದ್ದಿ ಕುಕನೂರು

**ಕುಕನೂರು: ಐತಿಹಾಸಿಕ ಪ್ರಸಿದ್ದ ಗುದ್ನೇಶ್ವರ ಮಠದ ಗುದ್ನೇಶ್ವರ ಸ್ವಾಮಿಯ ಕಕ್ಕಿಹಳ್ಳಿ ಅಳಿಯ ಶ್ರೀ ಚನ್ನಬಸವೇಶ್ವರ ಜಾತ್ರಾ ಮಹೋತ್ಸವವು ಶ್ರಾವಣ ಕೊನೆಯ ಮಂಗಳವಾರದಂದು ಸಾವಿರಾರು ಭಕ್ತಾಧಿಗಳ ಜಯಘೋಷದೊಂದಿಗೆ ಅದ್ದೂರಿಯಾಗಿ ನೆರವೇರಿತು.**

ಪ್ರತಿ ವರ್ಷದ ಪದ್ಧತಿಯಂತೆ ಶ್ರಾವಣ ಮಾಸದಲ್ಲಿ ಬರುವ ಕೊನೆಯ ಮಂಗಳವಾರದಂದು ಜಾತ್ರಾ ಮಹೋತ್ಸವವನ್ನು, ಗ್ರಾಮದ ಸರ್ವ ಭಕ್ತಾಧಿಗಳು ಅತಿ ವೈಭವದಿಂದ ನಡೆಸಿಕೊಂಡುಬರುತ್ತಿದ್ದಾರೆ. ಸುಮಾರು ಆರುನೂರು ವರ್ಷಗಳ ಇತಿಹಾಸ ಹೊಂದಿರುವ ಶ್ರೀ ಅಳಿಯ ಚನ್ನಬಸವೇಶ್ವರನು,



ಗುದ್ನೇಶ್ವರ ಸ್ವಾಮಿಯ ಅಳಿಯನಾಗಿದ್ದು, ಶ್ರಾವಣ ಸೋಮವಾರದ ಮೂರನೇ ಸೋಮವಾರ ಚನ್ನಬಸವೇಶ್ವರ ಪಾಲಕಿ ಸೇವೆಯು ಕೋನಾಪೂರ ಗ್ರಾಮಕ್ಕೆ ಹೋಗಿ ಮರಳಿ ಶಿವಕುಂಡ ಹಾಗೂ ಅಲ್ಲಿಂದ ಒಳ್ಳಮ್ಮ ದೇವಸ್ಥಾನದ ಜಾತ್ರೆಗೆ ಹೋಗುತ್ತದೆ ನಂತರ ಅಳಿಯಪ್ಪನ ಮಠಕ್ಕೆ ಪಾಲಕಿ ಸೇವೆ ಮರಳಿ ಆಗಮಿಸುತ್ತದೆ.

ಶ್ರಾವಣ ಕೊನೆಯ ಸೋಮವಾರದಂದು ಅಳಿಯ ಚನ್ನಬಸವೇಶ್ವರ ಪಾಲಕಿ ಮೆರವಣಿಗೆ ಗುದ್ನೇಶ್ವರನ ಮಠಕ್ಕೆ ಹೋಗಿ ಅಲ್ಲಿಂದ ಕುಂತಳ ನಗರ ಹಾಗೂ ಕುಕನೂರು ಶಿಬಾರ ಕಟ್ಟೆ, ಹಾಗೂ ಗುದ್ನೇಶ್ವರನಮಠ ತಲುಪಿ ಮರಳಿ ಅಳಿಯಪ್ಪನ ಮಠಕ್ಕೆ ಆಗಮಿಸುತ್ತದೆ ಎಂದು ಈರಯ್ಯ ಕುರ್ತಕೋಟಿ ಮತ್ತು ಮಲ್ಲಿಕಾರ್ಜುನಯ್ಯ ಪೂಜಾರ ತಿಳಿಸಿದರು. ಜಾತ್ರಾ ಮಹೋತ್ಸವದಲ್ಲಿ ಗುರುಸಂಗಯ್ಯ ಹಲಸಿನಮರದ, ಮಹಾದೇವಯ್ಯ ಹುಲಕೋಟಿಮಠ, ಮಲ್ಲಿಕಾರ್ಜುನಯ್ಯ ಹತ್ತಲಗೇರಿಮಠ, ವಿರುಪಾಕ್ಷಯ್ಯ ಕುರ್ತಕೋಟಿಮಠ, ಕಲ್ಲಯ್ಯ ಕೋರಾಣಿಮಠ, ಉಮೇಶ ಬಡಗೇರ್, ಸಂಗಯ್ಯ ಪೂಜಾರ, ಶರಣಯ್ಯ ಹಲಸಿನಮರದ, ಚನ್ನಬಸಯ್ಯ ಯಲಬುರ್ಗಿ, ನಾಗಯ್ಯ ನೆರಗಲ್, ಶರಣಯ್ಯ ಬಿನ್ನಾಳ, ನೀಲಕಂಠಯ್ಯ ಕೆಂಬಾವಿ, ಸೋಮಶೇಖರಯ್ಯ ಮ್ಯಾಗೇರಿ, ಸಂಗಯ್ಯ ಹಲಸಿನಮರದ, ಶರಣಯ್ಯ ಹಲಸಿನಮರದ, ಅಮರಯ್ಯ ಮಾಟ್ರಂಗಿ, ಸುರೇಶ ಬಡಗೇರ, ರುದ್ರಯ್ಯ ಹಲಸಿನಮರದ, ಶಿವಾನಂದಯ್ಯ ಹಳ್ಳಿಗುಡಿ ಸೇರಿದಂತೆ ಇತರರು ಇದ್ದರು. ಈ ಜಾತ್ರಾ ಮಹೋತ್ಸವದಲ್ಲಿ ಗ್ರಾಮದ ಮಹಿಳೆಯರೇ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಾರ್ಯಕ್ರಮ ನಡೆಸುತ್ತಾರೆ. ಈ ವರ್ಷ ಪ್ರಸಾದ ಸೇವೆಯಲ್ಲಿ ಮಹಿಳೆಯರು ಜೀಲೆಬಿ ಸೇವೆಯನ್ನು ನಡೆಸಿದರು.

# ವಿಕಸಿತ ಭಾರತ ಗುರಿ ಸಾಧನೆಗೆ ಎಲೆಕ್ಟ್ರಿಕ್ ವಾಹನ ಉದ್ಯಮ ಬಹುದೊಡ್ಡ ಕೊಡುಗೆ ನೀಡಲಿದೆ : ಹೆಚ್ಡಿಕೆ

ಅ.ಶ. ಸುದ್ದಿ ಕುಕನೂರು

**ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ಸಂಕಲ್ಪದಂತೆ 2047ರ ವೇಳೆಗೆ ವಿಕಸಿತ ಭಾರತ ನಿರ್ಮಾಣದ ಗುರಿ ಸಾಧಿಸುವಲ್ಲಿ ಎಲೆಕ್ಟ್ರಿಕ್ ವಾಹನ ಉದ್ಯಮ ಬಹುದೊಡ್ಡ ಕೊಡುಗೆ ನೀಡಲಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.**

ಈ ಕುರಿತು ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ಜಾಗತಿಕ ಮಟ್ಟದ ಪೈಪೋಟಿಯಲ್ಲಿ ಭಾರತ ಯಶಸ್ವಿಯಾಗಿ



ಮುನ್ನಡೆಯುತ್ತಿದ್ದು, ದೇಶದ ರಸ್ತೆಗಳಲ್ಲಿ ಎಲೆಕ್ಟ್ರಿಕ್ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಹೇಳಿದ್ದಾರೆ. ವಿಶ್ವ ಇವಿ ದಿನದ ಸಂದರ್ಭದಲ್ಲಿ ಭಾರತದ ಎಲೆಕ್ಟ್ರಿಕ್ ವಾಹನ ವಲಯದ ಗಮನಾರ್ಹ ಬೆಳವಣಿಗೆಯನ್ನು ಪ್ರಸ್ತಾಪಿಸಿರುವ ಅವರು, ಪ್ರಧಾನಿ ಮೋದಿ ಅವರ ನಾಯಕತ್ವ ಹಾಗೂ ದೂರದೃಷ್ಟಿಯಿಂದ ಆಗಿರುವ ಪರಿವರ್ತನಾತ್ಮಕ ಬದಲಾವಣೆಗಳು ದೇಶದ ಇವಿ ಕ್ಷೇತ್ರಕ್ಕೆ ವಿಶೇಷ ಶಕ್ತಿ ತುಂಬಿವೆ ಎಂದು ತಿಳಿಸಿದ್ದಾರೆ.

ದೇಶದಲ್ಲಿ 1.01 ಕೋಟಿಗೂ ಹೆಚ್ಚು ಎಲೆಕ್ಟ್ರಿಕ್ ವಾಹನಗಳು ಮಾರಾಟವಾಗಿದ್ದು, ರಸ್ತೆಗಳಲ್ಲಿ ಇವುಗಳ ಸಂಚಾರ ವೇಗ ಪಡೆದುಕೊಳ್ಳುತ್ತಿದೆ. ಬೃಹತ್ ಕೈಗಾರಿಕೆಗಳ ಸಚಿವಾಲಯವು ಪಿಎಂ ಇ-ಡ್ರೈವ್ ಸೇರಿದಂತೆ ವಿವಿಧ ಉಪಕ್ರಮಗಳ ಮೂಲಕ ಈ ಪರಿವರ್ತನೆಗೆ ಉತ್ತೇಜನ ನೀಡುತ್ತಿದೆ ಎಂದು ಹೇಳಿದ್ದಾರೆ. ಪಿಎಂ ಇ-ಡ್ರೈವ್ ಯೋಜನೆಯಡಿ ಈಗಾಗಲೇ 25.88 ಲಕ್ಷಕ್ಕೂ ಹೆಚ್ಚು ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳು ಹಾಗೂ 2.75 ಲಕ್ಷ ಎಲೆಕ್ಟ್ರಿಕ್ ತ್ರಿಚಕ್ರ ವಾಹನಗಳು ಸೇರಿದಂತೆ ಒಟ್ಟು 28.63 ಲಕ್ಷ ಎಲೆಕ್ಟ್ರಿಕ್ ವಾಹನಗಳ ನಿಯೋಜನೆಗೆ ಬೆಂಬಲ ನೀಡಲಾಗಿದೆ ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka